ಕರ್ನಾಟಕ ಸರ್ಕಾರ
**Government of Karnataka**

# ಆರ್ಥಿಕ ಇಲಾಖೆ

# ಮಧ್ಯಮಾವಧಿ ವಿತ್ತೀಯ ಯೋಜನೆ

## 2010 – 2014

(2010ನೆಯ ಇಸವಿ ಮಾರ್ಚ್ ತಿಂಗಳಲ್ಲಿ ವಿಧಾನಮಂಡಲದ ಮುಂದೆ ಮಂಡಿಸಿದಂತೆ)

**(As Presented to the Legislature in March 2010)**

# ಅನುಸರಣಾ ಹೇಳಿಕೆ

- ಈ 2010–14ರ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ(2002)ರ 3ನೇ ಪ್ರಕರಣದ ಅನುಸಾರ ವಿಧಾನಮಂಡಲದ ಮುಂದೆ ಮಂಡಿಸಲಾಗಿದೆ.

- ಅಧಿನಿಯಮದ 3ನೇ ಪ್ರಕರಣವು ಮಧ್ಯಮಾವಧಿ ವಿತ್ತೀಯ ಯೋಜನೆಯು ಈ ಮುಂದಿನ ಅಂಶಗಳನ್ನು ಹೊಂದಿರಬೇಕೆಂದು ಅಗತ್ಯಪಡಿಸುತ್ತದೆ.

  1. ಹಿಂದಿನ ವರ್ಷಗಳಲ್ಲಿ ನಿಗದಿಪಡಿಸಿದ ವಿತ್ತೀಯ ಸೂಚಕಗಳ ಕಾರ್ಯನಿರ್ವಹಣೆಯ ಮೌಲ್ಯಮಾಪನ (ಅಧ್ಯಾಯ 2).
  2. ಇತ್ತೀಚಿನ ಆರ್ಥಿಕ ಪ್ರವೃತ್ತಿಗಳು ಮತ್ತು ಬೆಳವಣಿಗೆ ಮತ್ತು ಅಭಿವೃದ್ಧಿಗೆ ನಿರೀಕ್ಷೆಯ ಹೇಳಿಕೆ (ಅಧ್ಯಾಯ 3).
  3. ಸರ್ಕಾರದ ಕಾರ್ಯತಂತ್ರದ ಆದ್ಯತೆಗಳು ಮತ್ತು ಪ್ರಮುಖ ವಿತ್ತೀಯ ನೀತಿಗಳು ಮತ್ತು ಅವುಗಳ ದೃಢತೆಯ ಮೌಲ್ಯಮಾಪನ (ಅಧ್ಯಾಯ 4ರಿಂದ 7).
  4. ನಾಲ್ಕು ವರ್ಷಗಳ ಚಲನಶೀಲ ಗುರಿಗಳು (ಅಧ್ಯಾಯ 7).
  5. ರಾಜಸ್ವ ಕೊರತೆ ಮತ್ತು ಉತ್ಪಾದನಾ ಉದ್ದೇಶಗಳಿಗಾಗಿ ಬಂಡವಾಳ ಸ್ವೀಕೃತಿಗಳ ಬಳಕೆಗೆ ಸಂಬಂಧಿಸಿದಂತೆ ಸುಸ್ಥಿರತೆಯ ನಿರ್ಧರಣೆ.

| ಪರಿವಿಡಿ | ಕ್ರಮ ಸಂಖ್ಯೆ |
|---|---|
| **ಅಧ್ಯಾಯ 1: ಪೀಠಿಕೆ** | **01** |
| ಆರ್ಥಿಕ ನೋಟ | 01 |
| ವಿತ್ತೀಯ ಪರಿಸ್ಥಿತಿ | 03 |
| ಪ್ರಮುಖ ಸವಾಲುಗಳು ಮತ್ತು ಮುಂದಿನ ದಾರಿ | 05 |
| **ಅಧ್ಯಾಯ 2: ವಿತ್ತೀಯ ನಿರ್ವಹಣೆ ಮೌಲ್ಯಮಾಪನ** | **08** |
| ವಿತ್ತೀಯ ಸೂಚಕಗಳ ನಿರ್ವಹಣೆ | 08 |
| ಹೆಚ್ಚುವರಿ ರಾಜಸ್ವ ಕೊರತೆ | 11 |
| **ಅಧ್ಯಾಯ 3: ಸ್ಥೂಲ ಆರ್ಥಿಕ ದೃಷ್ಟಿಕೋನ** | **13** |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 13 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ | 13 |
| ಹಣದುಬ್ಬರದ ಪ್ರವೃತ್ತಿಗಳು | 15 |
| ಕಾರ್ಯನೀತಿ ಪ್ರಯತ್ನಗಳು | 16 |
| **ಅಧ್ಯಾಯ 4: ರಾಜಸ್ವ ಸುಧಾರಣೆಗಳು ಮತ್ತು ಪರಿಕಲ್ಪನೆ** | **17** |
| ಪ್ರಮುಖ ಸ್ವಂತ ತೆರಿಗೆ ರಾಜಸ್ವಗಳ ಪ್ರವೃತ್ತಿ | 17 |
| ವಾಣಿಜ್ಯ ತೆರಿಗೆಗಳು | 19 |
| ಅಬಕಾರಿ | 22 |
| ಮುದ್ರಾಂಕ ಮತ್ತು ನೋಂದಣಿ | 23 |
| ಮೋಟಾರು ವಾಹನ ತೆರಿಗೆಗಳು | 24 |
| ತೆರಿಗೆ ರಹಿತ ರಾಜಸ್ವ | |
| ಅ) ಪ್ರಮುಖ ಮತ್ತು ಅಪ್ರಮುಖ ಖನಿಜಗಳ ಮೇಲಿನ ಸ್ವಾಮ್ಯ ಶುಲ್ಕ (ರಾಯಲ್ಟಿ) | 26 |
| ಆ) ಜಮೀನು ಮಾರಾಟದಿಂದ ಸ್ವೀಕೃತಿಗಳು | 26 |
| **ಅಧ್ಯಾಯ 5: ವೆಚ್ಚ ನಿರ್ವಹಣೆ ಮತ್ತು ಪರಿಕಲ್ಪನೆ** | **27** |
| ಕೃಷಿ | 30 |
| ಗ್ರಾಮೀಣ ಅಭಿವೃದ್ಧಿ | 31 |
| ಆರೋಗ್ಯ ಮತ್ತು ಶಿಕ್ಷಣ | 32 |
| ವಿದ್ಯುತ್ | 33 |
| ನಗರಾಭಿವೃದ್ಧಿ | 34 |
| ಬದ್ಧ ವೆಚ್ಚಗಳು | 36 |
| **ಅಧ್ಯಾಯ 6: ಸಾರ್ವಜನಿಕ ಹಣಕಾಸು ನಿರ್ವಹಣೆ ಮತ್ತು ವ್ಯವಸ್ಥಿತ ಸುಧಾರಣೆಗಳು** | **38** |
| ವೆಚ್ಚ ಸುಧಾರಣಾ ಆಯೋಗ | 38 |
| ಖಜಾನೆ 2 | 40 |
| ಹಣಕಾಸು ವಿಲೀನೀಕರಣ | 41 |
| ಮಾಹಿತಿ ತಂತ್ರಜ್ಞಾನ ಉಪಕ್ರಮಗಳು | 42 |
| ಹೊಸ ನಿವೃತ್ತಿ ವೇತನ ಯೋಜನೆ | 43 |
| **ಅಧ್ಯಾಯ 7: ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು 2010–14** | **44** |

# ಅಧ್ಯಾಯ 1

## ಎ) ಆರ್ಥಿಕ ನೋಟ

### ಆರ್ಥಿಕ ನೋಟ

1. ಕಳೆದ ವರ್ಷ ಹಿಂದೆಂದೂ ಕಂಡಿಲ್ಲದ ಒಂದು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮಧ್ಯಮಾವಧಿ ವಿತ್ತೀಯ ಯೋಜನೆ 2009–13ನ್ನು ಮಂಡಿಸಲಾಗಿತ್ತು. ಬಹುಮಟ್ಟಿಗೆ ಕೇವಲ ಅಮೆರಿಕದ ಹಣಕಾಸಿನ ವ್ಯವಸ್ಥೆಯ ಬಿಕ್ಕಟ್ಟಿನ ರೂಪದಲ್ಲಿ ಪ್ರಾರಂಭವಾಗಿ ನಂತರ ಜಾಗತಿಕ ಮಟ್ಟದ ಹಣಕಾಸಿನ ಬಿಕ್ಕಟ್ಟಾಗಿ ಪರಿವರ್ತನೆಗೊಂಡುದಲ್ಲದೆ, ಈ ಸಮಸ್ಯೆಯು ಇಡೀ ಜಗತ್ತಿನ ಅರ್ಥ ವ್ಯವಸ್ಥೆಯ ಬಿಕ್ಕಟ್ಟಾಗಿ ಪರಿಣಮಿಸಿದ ವೇಗ ಅತ್ಯಂತ ಕ್ಷಿಪ್ರವೂ ಅನಿರೀಕ್ಷಿತವೂ ಆಗಿತ್ತು. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ವಿದೇಶಿ ಹಣಕಾಸು ದೊರಕುತ್ತಿದ್ದ ಕಡೆಗೆ ದೇಶಿ ಹಣಕಾಸನ್ನು ನೀಡಬೇಕಾಗಿ ಬಂದ ಕಾರಣ ಭಾರತದ ಅರ್ಥ ವ್ಯವಸ್ಥೆ ಧನಾನುಕೂಲತೆಯ ಒತ್ತಡಗಳಿಗೆ ಈಡಾಗಬೇಕಾಯಿತು. ಹಣ ಮತ್ತು ಸಾಲದ ಮಾರುಕಟ್ಟೆಗಳು ತೀವ್ರ ಒತ್ತಡಕ್ಕೆ ಒಳಗಾಗಿ ವ್ಯವಹಾರಗಳಿಗೆ ಸಾಲದ ಲಭ್ಯತೆಯು ಕಡಿಮೆಯಾಯಿತು ಮತ್ತು ಬಡ್ಡಿದರಗಳಲ್ಲಿ ಹೆಚ್ಚಳವಾಗಿ ಉತ್ಪಾದನಾ ಮತ್ತು ಸೇವಾ ವಲಯಗಳಲ್ಲಿ ಪ್ರಗತಿ ಕುಸಿತ ಕಂಡಿತು.

2. ಕರ್ನಾಟಕದ ಅರ್ಥ ವ್ಯವಸ್ಥೆ ಸಹ ಈ ಬಿಕ್ಕಟ್ಟಿನ ಪ್ರಭಾವಕ್ಕೆ ಒಳಗಾಯಿತು. 2009–10ನೇ ಸಾಲಿನ ಬಹಳಷ್ಟು ಭಾಗ ಸರ್ಕಾರದ ಹಣಕಾಸು ಪರಿಸ್ಥಿತಿಯ ಮೇಲೆ ಒತ್ತಡವಿದ್ದು ರಾಜಸ್ವ ಸಂಗ್ರಹಣೆಗೆ ತೊಂದರೆಯಾಗಿದ್ದರಿಂದ ರಾಜ್ಯ ಸರ್ಕಾರವು ತನ್ನ ಆಯವ್ಯಯದ ರಾಜಸ್ವ ಗುರಿಗಳನ್ನು ತಲುಪಲು ಕಷ್ಟವಾಯಿತು. ಆದಾಗ್ಯೂ, ಕಳೆದ ತ್ರೈಮಾಸಿಕದಲ್ಲಿ ಜಾಗತಿಕ ಪರಿಸ್ಥಿತಿಯು ಗಮನಾರ್ಹವಾಗಿ ಸುಧಾರಣೆಗೊಂಡಿದೆ. ಬಹಳಷ್ಟು ಅರ್ಥ ವ್ಯವಸ್ಥೆಗಳು ಚೇತರಿಸಿಕೊಂಡಿವೆ. ಆದರೆ ಈಗ ಕೊಡುತ್ತಿರುವ ವಿತ್ತೀಯ ಉತ್ತೇಜಕ ಕ್ರಮಗಳನ್ನು ಆಯಾ

ಸರ್ಕಾರಗಳು ಹಿಂತೆಗೆದುಕೊಂಡರೆ ಸುಧಾರಣಾಗತಿಯಲ್ಲಿ ಇಳಿಮುಖವಾಗುವ ಅಪಾಯಗಳು ಇನ್ನೂ ಇದೆ. ಅಲ್ಲದೆ, ನಿರುದ್ಯೋಗ ಹೆಚ್ಚುವ, ವಿತ್ತೀಯ ಕೊರತೆಗಳು ಹೆಚ್ಚುತ್ತಾ ಹೋಗುವ ಮತ್ತು ಉತ್ಪಾದನಾ ವಲಯಗಳಿಗೆ ಸಾಲ ದೊರೆಯದೇ ಹೋಗುವ ಆತಂಕ ಕೂಡ ಇದೆ. ಇದರೊಂದಿಗೆ, ಅರ್ಥ ವ್ಯವಸ್ಥೆಯು, ಆಹಾರ ಪದಾರ್ಥಗಳ ಬೆಲೆಏರಿಕೆ ನಿಯಂತ್ರಣ, ಸಾಲ ನೀಡಿಕೆಯ ಪುನ:ಶ್ಚೇತನ ಮತ್ತು ಬಂಡವಾಳ ಹರಿವಿನ ವಿಪರ್ಯಯ ಮುಂತಾದ ಸವಾಲುಗಳನ್ನು ಸಹ ಎದುರಿಸುತ್ತಿದೆ. ಕರ್ನಾಟಕದ ಅರ್ಥ ವ್ಯವಸ್ಥೆಯು ಈ ಬಿಕ್ಕಟ್ಟನ್ನು ದಿಟ್ಟವಾಗಿ ಎದುರಿಸಿರುವಂತಿದೆ ಮತ್ತು ಕಳೆದ ತ್ರೈಮಾಸಿಕದಲ್ಲಿನ ರಾಜಸ್ವ ಸಂಗ್ರಹಣೆಗಳು ಸಂಕಷ್ಟಪೂರ್ವ ಪರಿಸ್ಥಿತಿಗಳಲ್ಲಿ ದಾಖಲಾಗಿದ್ದ ಬೆಳವಣಿಗೆಯ ಮಟ್ಟಗಳನ್ನು ತಲುಪುವ ಚಿಹ್ನೆಯನ್ನು ತೋರಿಸುತ್ತಿವೆ.

3. 2009–10ನೇ ಸಾಲಿನಲ್ಲಿ, ವಿತ್ತೀಯ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.2.88 ರಷ್ಟೆಂದು, ರಾಜಸ್ವ ಹೆಚ್ಚುವರಿಯನ್ನು ಅದರ ಶೇ 0.39ರಷ್ಟೆಂದು ಅಂದಾಜು ಮಾಡಲಾಗಿದೆ. 2009–10ನೇ ಸಾಲಿನಲ್ಲಿ ನೈಜ ದರಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಶೇ. 6ರಷ್ಟು ಮತ್ತು ಹಣದುಬ್ಬರ ಶೇ 4ರಷ್ಟು ಹೆಚ್ಚಳವಾಗುವುದೆಂದು ನಿರೀಕ್ಷಿಸಲಾಗಿತ್ತು. ಆರ್ಥಿಕ ಸಂಕಷ್ಟ ಮತ್ತು ಅದರ ಪರಿಣಾಮದಿಂದ ಉಂಟಾದ ಪರಿಣಾಮಗಳ ಕಾರಣದಿಂದ 2009–10ನೇ ಸಾಲಿಗೆ ಸಂಬಂಧಿಸಿದ ಪ್ರಸಕ್ತ ಬೆಲೆಗಳ ಮೇಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯ ಅಂದಾಜುಗಳು 2008–09 ರಲ್ಲಿದ್ದ ಶೆ12.8 ಮತ್ತು 2007–08 ರಲ್ಲಿದ್ದ ಶೇ.16.7ಕ್ಕೆ ಹೋಲಿಸಲಾಗಿ ಶೇ. 10.3 ರಷ್ಟಿರುತ್ತದೆ. ಆದಾಗ್ಯೂ ಆರ್ಥಿಕ ವ್ಯವಸ್ಥೆಯು, 2004–05ರಿಂದ 2007–08ನೇ ಸಾಲುಗಳ ಅವಧಿಯಲ್ಲಿ ಅನುಭವಿಸಿದ್ದ ಹೆಚ್ಚಿನ ಬೆಳವಣಿಗೆಯ ಗತಿಯನ್ನು ಮರಳಿ ಪಡೆಯುತ್ತದೆಂದು ನಿರೀಕ್ಷಿಸಲಾಗಿದೆ.

4. ಹಿಂದಿನ ಮತ್ತು ಪ್ರಸಕ್ತ ವರ್ಷದಲ್ಲಿ ಕಂಡುಬಂದ ನಿಧಾನಗತಿಗೆ ಹೋಲಿಸಿ ನೋಡಿ ಅರ್ಥವ್ಯವಸ್ಥೆಯಲ್ಲಿ ಮತ್ತೆ ಸದೃಢ ಬೆಳವಣಿಗೆ ಉಂಟಾಗುವ ನಿರೀಕ್ಷೆಯಲ್ಲಿ ಈ ಮಧ್ಯಮಾವಧಿ ವಿತ್ತೀಯ ಯೋಜನೆ 2010–14ನ್ನು ಮಂಡಿಸಲಾಗುತ್ತಿದೆ. ಮತ್ತೆ ಹೆಚ್ಚಿನ ಬೆಳವಣಿಗೆ ಸಾಧಿಸಬೇಕಾದರೆ, ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವುದು, ಅಭಿವೃದ್ಧಿ ಮತ್ತು ಸಾಮಾಜಿಕ ವಲಯದ ಕಾರ್ಯಕ್ರಮಗಳಿಗೆ ಗಮನ ಕೇಂದ್ರೀಕರಿಸುವುದು ಮತ್ತು ವೆಚ್ಚದ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ ನಿರಂತರವಾಗಿ ಪ್ರಯತ್ನ ಮಾಡುವುದು ಅಗತ್ಯ ಎಂಬುದನ್ನು ಸರ್ಕಾರ ಮನಗಂಡಿರುತ್ತದೆ.

## ಬಿ) <u>ವಿತ್ತೀಯ ಪರಿಸ್ಥಿತಿ</u>

5. ರಾಜ್ಯ ಸರ್ಕಾರಗಳು ಆರ್ಥಿಕ ಹೊಣೆಗಾರಿಕೆ ಅಧಿನಿಯಮಗಳನ್ನು ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರ ರಾಜ್ಯಗಳಿಗೆ ಮನವರಿಕೆ ಮಾಡಿಸುವುದಕ್ಕೆ ಮುಂಚಿತವಾಗಿಯೇ ಕರ್ನಾಟಕ ಸರ್ಕಾರವು, ಕರ್ನಾಟಕ ಸರ್ಕಾರಿ ಖಾತರಿಗಳ ಗರಿಷ್ಠ ಮಿತಿ ಅಧಿನಿಯಮ, 1999 ಮತ್ತು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ಜಾರಿಗೆ ತಂದಿತ್ತು. ಈ ಅಧಿನಿಯಮಗಳ ಬಲದಿಂದ ರಾಜ್ಯ ಸರ್ಕಾರವು ತನ್ನ ವಿತ್ತೀಯ ಪರಿಸ್ಥಿತಿಯನ್ನು ಸದೃಢಗೊಳಿಸಿರುತ್ತದೆ ಮತ್ತು ವಿತ್ತೀಯ ಸದೃಢತೆಯ ಹಾದಿಯಲ್ಲಿ ಮೊದಲಿನಿಂದಲೂ ಮಂಚೂಣಿಯಲ್ಲಿ ಇರುತ್ತದೆ. ಬಹುಪಾಲು ರಾಜ್ಯಗಳ ವಿತ್ತೀಯ ಹೊಣೆಗಾರಿಕೆ ಅಧಿನಿಯಮಗಳಲ್ಲಿ ಪರಿಕಲ್ಪಿಸಿರುವ ವಿತ್ತೀಯ ಸರಿಪಡಿಸುವಿಕೆ ಕ್ರಮಗಳ ಪ್ರಕಾರ 2008–09ರ ವೇಳೆಗೆ ರಾಜಸ್ವ ಕೊರತೆಯನ್ನು ನಿವಾರಣೆ ಮಾಡಬೇಕು ಮತ್ತು 2009–10ರ ವೇಳೆಗೆ ಒಟ್ಟು ವಿತ್ತೀಯ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.3 ರಷ್ಟಕ್ಕೆ ತಗ್ಗಿಸಬೇಕು. ಆದರೆ ಕರ್ನಾಟಕವು 2004–05ನೇ ಸಾಲಿನಿಂದಲೇ ನಿರಂತರವಾಗಿ ರಾಜಸ್ವ ಹೆಚ್ಚಳವನ್ನು ದಾಖಲಿಸುತ್ತಿದೆ ಮತ್ತು ವಿತ್ತೀಯ ಕೊರತೆಗಳನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.3 ರೊಳಗೇ ಇರಿಸಿಕೊಂಡು ಬರುತ್ತಿದೆ.

6. 2008–09 ಮತ್ತು 2009–10ನೇ ಸಾಲುಗಳಲ್ಲಿ ಮಾತ್ರ ಕೇಂದ್ರ ಸರ್ಕಾರ ನೀಡಿದ ಸಲಹೆಗನುಗುಣವಾಗಿ ಶೇ.3ರ ವಿತ್ತೀಯ ಕೊರತೆಯ ಮಿತಿಯನ್ನು, 2008–09 ರಲ್ಲಿ ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇ. 3.5 ರಷ್ಟು ಮತ್ತು 2009–10ರಲ್ಲಿ ಶೇ. 4 ರಷ್ಟಕ್ಕೆ ಏರಿಸಲಾಗಿದೆ. ಈ ಎರಡೂ ವರ್ಷಗಳಲ್ಲಿ ಪರಿಷ್ಕೃತ ಮಿತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆ. ಈ ವರ್ಷಗಳಲ್ಲೂ ರಾಜಸ್ವ ಹೆಚ್ಚುವರಿ ಪರಿಸ್ಥಿತಿಯನ್ನು ಉಳಿಸಿಕೊಂಡು ಬರಲಾಗಿದೆ. ರಾಜಸ್ವ ಮತ್ತು ವಿತ್ತೀಯ ಕೊರತೆಯ ಗುರಿಗೆ ಹೋಲಿಸಲಾಗಿ ರಾಜ್ಯದ ವಿತ್ತೀಯ ಸಾಧನೆಯನ್ನು ಕೆಳಗಿನ ಕೋಷ್ಟಕ 1 ರಲ್ಲಿ ಕೊಡಲಾಗಿದೆ.

**ಕೋಷ್ಠಕ–1**

(ರೂ.ಗಳು ಕೋಟಿಗಳಲ್ಲಿ)

| ಬಾಬು | 2002–03 | 2003–04 | 2004–05 | 2005–06 | 2006–07 | 2007–08 | 2008–09 | 2009–10 ಅಂದಾಜುಗಳು |
|---|---|---|---|---|---|---|---|---|
| ನಾಮಿನಲ್ ಜಿಎಸ್‌ಡಿಪಿ | 120889 | 130990 | 156226 | 183796 | 205784 | 240062 | 270697 | 294952 |
| ವಿತ್ತೀಯ ಕೊರತೆ | 5281 | 4501 | 3600 | 3687 | 4688 | 5331 | 8732 | 8493 |
| ಜಿಎಸ್‌ಡಿಪಿಯ ಶೇಕಡಾವಾರಾಗಿ ವಿತ್ತೀಯ ಕೊರತೆ | 4.37% | 3.44% | 2.30% | 2.01% | 2.28% | 2.22% | 3.23% | 2.88% |
| ರಾಜಸ್ವ ಕೊರತೆ | 2646 | 457 | -1780 | -2512 | -4152 | -3540 | -1631 | -1151 |
| ಜಿಎಸ್‌ಡಿಪಿಯ ಶೇಕಡಾವಾರಾಗಿ ರಾಜಸ್ವ ಕೊರತೆ | 2.19% | 0.35% | -1.14% | -1.37% | -2.02% | -1.47% | -0.60% | -0.39% |

7. ರಾಜ್ಯದ ಹಣಕಾಸುಗಳ ವಿತ್ತೀಯ ಸುಸ್ಥಿರತೆಯನ್ನು ಉಳಿಸಿಕೊಂಡು ಬರುವುದಕ್ಕಾಗಿ ಮತ್ತು ಬಂಡವಾಳ ಹೂಡಿಕೆಗಳಿಗೆ ಹೆಚ್ಚು ಸಂಪನ್ಮೂಲಗಳನ್ನು ಒದಗಿಸುವುದಕ್ಕಾಗಿ ಇನ್ನುಮುಂದೆಯೂ ರಾಜಸ್ವ ಹೆಚ್ಚುವರಿಗಳನ್ನು ದಾಖಲಿಸುವುದನ್ನು ಮುಂದುವರಿಸುವುದು ರಾಜ್ಯ ಸರ್ಕಾರದ ಪ್ರಯತ್ನವಾಗಿರುತ್ತದೆ. ವಿತ್ತೀಯ ಶಿಸ್ತಿಗೆ ಕಟ್ಟುನಿಟ್ಟಾಗಿ ಬದ್ಧವಾಗಿದ್ದರೂ,

ರಾಜ್ಯವು ಮುಂದಿನ ಕೋಷ್ಟಕ 2 ರಲ್ಲಿ ವಿವರವಾಗಿ ಹೇಳಿರುವಂತೆ 12ನೇ ಹಣಕಾಸು ಆಯೋಗದ ಶಿಫಾರಸುಗಳಿಗನುಸಾರವಾಗಿ ಹಣಕಾಸು ಪ್ರೋತ್ಸಾಹಕಗಳನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಂಡಿದೆ. ಜಾಗತಿಕ ಹಣಕಾಸು ಬಿಕ್ಕಟ್ಟಿನ ಕಾರಣದಿಂದಾಗಿ ಅರ್ಥವ್ಯವಸ್ಥೆಯಲ್ಲಿನ ನಿಧಾನಗತಿಯನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಕರ್ನಾಟಕ ಆರ್ಥಿಕ ಹೊಣೆಗಾರಿಕೆಗಳ ಅಧಿನಿಯಮದ ಅಡಿಯಲ್ಲಿ ನಿಗದಿಪಡಿಸಿದ ಹಣಕಾಸು ಕೊರತೆಯ ಕಟ್ಟುಕಟ್ಟಳೆಗಳನ್ನು ಸಡಿಲಿಸಿ ರಾಜ್ಯ ಸರ್ಕಾರಕ್ಕೆ ಹೆಚ್ಚುವರಿ ಸಾಲ ಪಡೆದುಕೊಳ್ಳಲು ಅವಕಾಶ ನೀಡಿತು. 2008–09 ಮತ್ತು 2009–10 ರಲ್ಲಿ ರಾಜ್ಯ ಸರ್ಕಾರವು ತಾನು ಪಡೆದುಕೊಂಡ ಈ ಹೆಚ್ಚುವರಿ ಸಾಲಗಳನ್ನು ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಬಂಡವಾಳ ಹೂಡಿಕೆಗೆ ಬಳಸಿಕೊಂಡಿದೆ.

**ಕೋಷ್ಟಕ –2**

**XIIನೇ ಹಣಕಾಸು ಆಯೋಗದ ಶಿ ಫಾರಸಿನ ಪ್ರಕಾರ ಋಣ ಸಂಚಯನ**

(ರೂ.ಗಳು ಕೋಟಿಗಳಲ್ಲಿ)

| ವರ್ಷ | ಸಂಚಯನಕ್ಕೆ ಮೊದಲು | | ಸಂಚಯನಕ್ಕೆ ನಂತರ | | ಉಳಿತಾಯ | | ಸಾಲ ಮನ್ನಾ |
|---|---|---|---|---|---|---|---|
| | ಮೂಲಧನ | ಬಡ್ಡಿ | ಮೂಲಧನ | ಬಡ್ಡಿ | ಮೂಲಧನ | ಬಡ್ಡಿ | |
| **2006–07** | 404 | 786 | 358 | 511 | 45 | 276 | 358 |
| **2007–08** | 472 | 740 | 358 | 484 | 114 | 256 | 358 |
| **2008–09** | 468 | 685 | 358 | 457 | 109 | 228 | 358 |
| **2009–10** | 506 | 631 | 358 | 430 | 148 | 201 | 358 |
| **ಒಟ್ಟು** | **1850** | **2842** | **1433** | **1881** | **416** | **961** | **1433** |

**ಸಿ) ಪ್ರಮುಖ ಸವಾಲುಗಳು ಮತ್ತು ಮುಂದಿನ ದಾರಿ**

8. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮದಲ್ಲಿ ನಿರೂಪಿಸಿರುವ ವಿತ್ತೀಯ ಧ್ಯೇಯಗಳು ಮತ್ತು ನಿರ್ವಹಣಾ ತತ್ವಗಳನ್ನು ರಾಜ್ಯ ಸರ್ಕಾರವು ಕಟ್ಟುನಿಟ್ಟಾಗಿ ಪಾಲಿಸಿದೆ. ಜಾಗತಿಕ ಆರ್ಥಿಕ ಸಂಕಷ್ಟದ ಪರಿಣಾಮವಾಗಿ ಉಂಟಾದ ಆರ್ಥಿಕ ಕುಂಠಿತತೆಯ ದೃಷ್ಟಿಯಿಂದ ಕೇಂದ್ರ ಸರ್ಕಾರ, ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಅಡಿಯಲ್ಲಿನ ವಿತ್ತೀಯ

ಕೊರತೆ ನಿಬಂಧನೆಗಳನ್ನು ಸಡಿಲಿಸಿ ರಾಜ್ಯ ಸರ್ಕಾರಕ್ಕೆ ಹೆಚ್ಚುವರಿ ಸಾಲಗಳನ್ನು ಪಡೆಯುವುದಕ್ಕೆ ಅವಕಾಶ ಕಲ್ಪಿಸಿತು. 2008–09 ಮತ್ತು 2009–10ನೇ ಸಾಲಿನಲ್ಲಿ ರಾಜ್ಯ ಸರ್ಕಾರವು, ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವುದಕ್ಕೆ ಬಂಡವಾಳ ಹೂಡಿಕೆಗಳನ್ನು ಮಾಡುವುದಕ್ಕಾಗಿ ಹೆಚ್ಚುವರಿ ಸಾಲಗಳನ್ನು ಬಳಸಿಕೊಂಡಿತು.

9. ವಿತ್ತೀಯ ನಿಬಂಧನೆಗಳಲ್ಲಿ ಮಾಡಲಾದ ಈ ಸಡಿಲಿಕೆಯು ತಾತ್ಕಾಲಿಕ ಕ್ರಮವಾಗಿತ್ತು. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಲ್ಲಿ ಆಜ್ಞಾಪಕಗೊಳಿಸಿರುವ ಪರಿಮಿತಿಯೊಳಗೆ ವಿತ್ತೀಯ ಕೊರತೆಯನ್ನು ಹೊಂದುವುದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿರುತ್ತದೆ. ರಾಜ್ಯ ಸರ್ಕಾರವು, ಬಂಡವಾಳ ಹೂಡಿಕೆಗಳಿಗಾಗಿ ಹೆಚ್ಚಿನ ನಿಧಿಗಳನ್ನು ಸಂಗ್ರಹಿಸುವುದು ಸಾಧ್ಯವಾಗುವಂತೆ ರಾಜಸ್ವ ಹೆಚ್ಚುವರಿಗಳನ್ನು ಹೆಚ್ಚಿಸುವಂತೆ ನೋಡಿಕೊಳ್ಳಬೇಕಿರುತ್ತದೆ.

10. ರಾಷ್ಟ್ರದ ಅರ್ಥವ್ಯವಸ್ಥೆಯಂತೆಯೇ ರಾಜ್ಯದ ಅರ್ಥವ್ಯವಸ್ಥೆಯೂ ತನ್ನ ಉನ್ನತ ಸಾಮರ್ಥ್ಯದ ಮಟ್ಟಕ್ಕೆ ಬೆಳವಣಿಗೆಯನ್ನು ಇನ್ನೂ ಪಡೆದುಕೊಳ್ಳಬೇಕಾಗಿದೆ. ಆರ್ಥಿಕ ಬೆಳವಣಿಗೆಯಲ್ಲಿ ಕಂಡುಬಂದಿರುವ ಹೆಚ್ಚಳದ ಆರಂಭಿಕ ಚಿಹ್ನೆಗಳು ರಾಜ್ಯದ ತೆರಿಗೆ ಆದಾಯದಲ್ಲಿ ಪೂರ್ಣವಾಗಿ ಇನ್ನೂ ಬಿಂಬಿತವಾಗಬೇಕಾಗಿದೆ. ಇನ್ನು ರಾಜಸ್ವ ಕ್ಷೇತ್ರದಲ್ಲಿ ರಾಜ್ಯ ಸರ್ಕಾರವು ಕಂದಾಯ ಜಾರಿ ಚೆನ್ನಾಗಿ ಆಗುವಂತೆ ನೋಡಿಕೊಳ್ಳುವುದು, ನಿರಂತರ ಮರುಪರಿಶೀಲನೆ ಮತ್ತು ತೆರಿಗೆ ಪ್ರಯತ್ನಗಳ ಮೇಲ್ವಿಚಾರಣೆ ಮುಂತಾದ ಕ್ರಮಗಳನ್ನು ಮುಂಬರುವ ವರ್ಷದಲ್ಲಿ ತೆಗೆದುಕೊಳ್ಳಬೇಕಾಗಿದೆ. ವೆಚ್ಚದ ವಿಷಯಕ್ಕೆ ಬಂದರೆ, ಸಾಮಾಜಿಕ ವಲಯ ಹಾಗೂ ಆರ್ಥಿಕ ಮೂಲಸೌಕರ್ಯಗಳಿಗೆ ಆದ್ಯತೆ ನೀಡಲಾಗುವುದು. ಕೇಂದ್ರ ಪುರಸ್ಕೃತ ಯೋಜನೆ ಮತ್ತು ಕೇಂದ್ರ ಯೋಜನಾ ಸ್ಕೀಂಗಳ ಅಡಿಯಲ್ಲಿ ದೊರೆಯಲಿರುವ ನೆರವುಗಳನ್ನು ಪೂರ್ಣವಾಗಿ ಬಳಸಿಕೊಳ್ಳಲು ಕ್ರಮಗಳನ್ನು ಕೈಗೊಳ್ಳಲಾಗುವುದು. ಯೋಜನೇತರ ವೆಚ್ಚವನ್ನು

ನಿಯಂತ್ರಿಸುವ ಸಲುವಾಗಿ 2009–10 ರಲ್ಲಿ ಕೈಗೊಂಡ ಮಿತವ್ಯಯ ಕ್ರಮಗಳನ್ನು ಮುಂದಿನ ವರ್ಷಕ್ಕೂ ವಿಸ್ತರಿಸಲಾಗುವುದು.

11. ತೆರಿಗೆ ವಸೂಲಿಯ ಉತ್ತಮ ಜಾರಿ ಮತ್ತು ಮೇಲ್ವಿಚಾರಣಾ ಕ್ರಮಗಳ ಮೂಲಕ ರಾಜ್ಯ ಸರ್ಕಾರವು ಪ್ರತಿ ವರ್ಷ ಇಡೀ ದೇಶದಲ್ಲೇ ಒಟ್ಟು ರಾಜ್ಯದ ಆಂತರಿಕ ಉತ್ಪನ್ನಕ್ಕೆ ಅನುಪಾತವಾಗಿ ಉತ್ತಮ ಸ್ವಂತ ತೆರಿಗೆ ಆದಾಯವನ್ನು ದಾಖಲಿಸಿರುತ್ತದೆ. ಈ ಅಂಶವನ್ನು ಭಾರತದ ರಿಸರ್ವ್ ಬ್ಯಾಂಕಿನ ವರದಿಯಾದ ರಾಜ್ಯ ಹಣಕಾಸು 2008–09ರ ಆಯವ್ಯಯಗಳ ಒಂದು ಅಧ್ಯಯನ (State Finances: A study of Budgets 2008-09)ದಲ್ಲಿ ಗುರುತಿಸಿ ಹೇಳಲಾಗಿದೆ. ತೆರಿಗೆ ಪ್ರಯತ್ನದಲ್ಲಿ ಆಗಿರುವ ಉತ್ತಮ ಕಾರ್ಯನಿರ್ವಹಣೆಯು ತೆರಿಗೆಯೇತರ ರಾಜಸ್ವದ ಸಂದರ್ಭದಲ್ಲಿ ಆಗಿರುವುದಿಲ್ಲ. ದೇಶದಲ್ಲಿ ಒಟ್ಟು ರಾಜ್ಯ ಆಂತರಿಕ ಉತ್ಪನ್ನಕ್ಕೆ ಅತ್ಯಂತ ಕಡಿಮೆ ಅನುಪಾತಗಳಲ್ಲಿ ತೆರಿಗೆಯೇತರ ರಾಜಸ್ವವನ್ನು ಹೊಂದಿರುವ ರಾಜ್ಯ ನಮ್ಮದು. ಆರ್‌ಬಿಐ ವರದಿಯಲ್ಲಿ ದೊರಕುವ ಮಾಹಿತಿ ಪ್ರಕಾರ 2007–08 (ಪರಿಷ್ಕೃತ ಅಂದಾಜು) ಸಾಲಿನಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸ್ವಂತ ತೆರಿಗೆಯೇತರ ರಾಜಸ್ವದ ರಾಷ್ಟ್ರೀಯ ಸರಾಸರಿ ಶೇಕಡಾ 1.3 ಇದಕ್ಕೆ ಹೋಲಿಸಿದರೆ ಕರ್ನಾಟಕದ ಅನುಪಾತ ಶೇಕಡಾ 0.8. ತೆರಿಗೆಯೇತರ ಆದಾಯವನ್ನು ರಾಷ್ಟ್ರೀಯ ಸರಾಸರಿಗೆ ಹೆಚ್ಚಿಸಿದಲ್ಲಿ 1,000 ಕೋಟಿ ರೂ.ಗಳಿಗೂ ಹೆಚ್ಚು ಹೆಚ್ಚುವರಿ ತೆರಿಗೆಯೇತರ ರಾಜಸ್ವಗಳನ್ನು ಕ್ರೋಢೀಕರಿಸಬಹುದು. ಆದ್ದರಿಂದ ನಮ್ಮ ಸ್ವಂತ ತೆರಿಗೆ ಪ್ರಯತ್ನಗಳನ್ನು ಚೆನ್ನಾಗಿ ಜಾರಿಮಾಡಿ ಮೇಲ್ವಿಚಾರಣೆ ನಡೆಸುವುದರ ಜೊತೆಗೆ ತೆರಿಗೆಯೇತರ ರಾಜಸ್ವವನ್ನು ಸಂಗ್ರಹಿಸಲೂ ವಿಶೇಷ ಒತ್ತನ್ನು ನೀಡಲಾಗುವುದು.

## ಅಧ್ಯಾಯ 2

## ವಿತ್ತೀಯ ನಿರ್ವಹಣೆ ಮೌಲ್ಯಮಾಪನ

12. ಕರ್ನಾಟಕ ಸರ್ಕಾರವು 2004–05ರಿಂದ ನಿರಂತರವಾಗಿ ರಾಜಸ್ವ ಹೆಚ್ಚಳವನ್ನು ದಾಖಲಿಸಿದೆ. 2008–09 ಮತ್ತು 2009–10ನೇ ವರ್ಷಗಳನ್ನು ಬಿಟ್ಟರೆ, ಉಳಿದೆಲ್ಲಾ ವರ್ಷಗಳಲ್ಲಿ ಒಟ್ಟು ವಿತ್ತೀಯ ಕೊರತೆಯನ್ನು ಶೇಕಡಾ 3ರ ಒಳಗೇ ನಿಯಂತ್ರಿಸಿಕೊಂಡು ಬರಲಾಗಿದೆ. ಸದರಿ ಎರಡು ವರ್ಷಗಳಲ್ಲಿ ಭಾರತ ಸರ್ಕಾರದ ಸಲಹೆಯಂತೆ ರಾಜ್ಯ ಸರ್ಕಾರವು ಅನುಕ್ರಮವಾಗಿ ಅಂದಾಜು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇಕಡಾ 3.5 ರ ವರೆಗೆ ಮತ್ತು ಶೇಕಡಾ 4ರ ವರೆಗೆ ವಿತ್ತೀಯ ಕೊರತೆ ಹೊಂದಲು ಆರ್ಥಿಕ ಹೊಣೆಗಾರಿಕೆಗಳ ಅಧಿನಿಯಮವನ್ನು ತಿದ್ದುಪಡಿ ಮಾಡಿತು. ಕೆಳಗೆ ಕೊಟ್ಟಿರುವ 3ನೇ ಕೋಷ್ಠಕದಲ್ಲಿ ಪ್ರತಿ ವರ್ಷಕ್ಕೆ ಇರಿಸಲಾದ ಗುರಿಗೆ ಪ್ರತಿಯಾಗಿ ಆಗಿರುವ ವಾಸ್ತವಿಕ ಸಾಧನೆಯನ್ನು 2006–07 ರಿಂದ ಸೂಚಿಸುತ್ತ ರಾಜ್ಯದ ಹಣಕಾಸು ಕಾರ್ಯನಿರ್ವಹಣೆಯನ್ನು ತೋರಿಸಲಾಗಿದೆ.

**ಕೋಷ್ಟಕ – 3**
**ವಿತ್ತೀಯ ಚೌಕಟ್ಟು**

(ರೂ.ಗಳು ಕೋಟಿಗಳಲ್ಲಿ)

| ಬಾಬುಗಳು | 2006-07 ಅಂದಾಜು | 2006-07 ಲೆಕ್ಕ | 2007-08 ಅಂದಾಜು | 2007-08 ಲೆಕ್ಕ | 2008-09 ಅಂದಾಜು | 2008-09 ಲೆಕ್ಕ | 2009-10 ಅಂದಾಜು | 2009-10 ಪೂ.ಅಂ |
|---|---|---|---|---|---|---|---|---|
| ರಾಜಸ್ವ ಸ್ವೀಕೃತಿಗಳು | 35875 | 37587 | 40762 | 41151 | 47240 | 43291 | 48389 | 46406 |
| ಇದರಲ್ಲಿ | | | | | | | | |
| ರಾಜ್ಯ ಒಡೆತನದ ತೆರಿಗೆ ರಾಜಸ್ವಗಳಿಂದ | 22534 | 23301 | 26691 | 25987 | 31876 | 27646 | 32721 | 29339 |
| ತೆರಿಗೆಯೇತರ ರಾಜಸ್ವಗಳು | 4088 | 4098 | 1857 | 3358 | 1932 | 3159 | 2130 | 2495 |
| ಕೇಂದ್ರದಿಂದ ದೊರೆಯುವ ಸಂಪನ್ಮೂಲಗಳು – ವರ್ಗಾವಣೆ | 4609 | 5374 | 6300 | 6779 | 7982 | 7154 | 7645 | 7000 |
| – ಅನುದಾನಗಳು | 4644 | 4813 | 5914 | 5027 | 5450 | 5332 | 5893 | 7572 |
| ರಾಜಸ್ವ ವೆಚ್ಚ | 34341 | 33435 | 39135 | 37611 | 45713 | 41659 | 47238 | 45868 |
| ಇದರಲ್ಲಿ | | | | | | | | |
| ಬಡ್ಡಿ | 4366 | 4236 | 4818 | 4506 | 5278 | 4532 | 5578 | 5250 |
| ವೇತನಗಳು | 6724 | 6545 | 8547 | 8410 | 11413 | 9927 | 11305 | 11306 |
| ನಿವೃತ್ತಿ ವೇತನಗಳು | 2666 | 2496 | 3416 | 3241 | 3500 | 4113 | 4001 | 3500 |
| ಸಹಾಯಧನ (ಆಹಾರ,ಸಾರಿಗೆ, ವಸತಿ | 1741 | 1991 | 2517 | 3364 | 1492 | 1472 | 1960 | 1744 |

## ಕೋಷ್ಟಕ – 3
## ವಿತ್ತೀಯ ಚೌಕಟ್ಟು

(ರೂ.ಗಳು ಕೋಟಿಗಳಲ್ಲಿ)

| ಬಾಬುಗಳು | 2006-07 ಅಂದಾಜು | 2006-07 ಲೆಕ್ಕ | 2007-08 ಅಂದಾಜು | 2007-08 ಲೆಕ್ಕ | 2008-09 ಅಂದಾಜು | 2008-09 ಲೆಕ್ಕ | 2009-10 ಅಂದಾಜು | 2009-10 ಪೂ.ಅಂ |
|---|---|---|---|---|---|---|---|---|
| ಮತ್ತು ಕೈಗಾರಿಕೆ) | | | | | | | | |
| ವಿದ್ಯುತ್ ಸಹಾಯಧನ | 1800 | 2370 | 2150 | 2297 | 2410 | 1943 | 2400 | 1900 |
| ಯುಎಲ್‌ಬಿಗಳಿಗೆ ವರ್ಗಾವಣೆ | 1530 | 1639 | 1904 | 1926 | 2995 | 2374 | 2720 | 2370 |
| ಪ್ರಮುಖ ಒ ಮತ್ತು ಎಂ (ರಸ್ತೆಗಳು, ಕಟ್ಟಡಗಳು ಮತ್ತು ನೀರಾವರಿ) | 1018 | 1011 | 810 | 740 | 834 | 636 | 750 | 711 |
| ಇತರೆ ಓ ಮತ್ತು ಎಂ (ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಕೃಷಿ, ಅರಣ್ಯ) | 3438 | 3477 | 8663 | 7012 | 8388 | 8487 | 4413 | 4275 |
| ಆಡಳಿತಾತ್ಮಕ ವೆಚ್ಚ | 687 | 559 | 799 | 688 | 921 | 742 | 832 | 938 |
| ಇತರೆ ರಾಜಸ್ವ ವೆಚ್ಚ | 10372 | 9112 | 5511 | 5428 | 8482 | 7433 | 13280 | 13873 |
| ಬಂಡವಾಳ ಸ್ವೀಕೃತಿ (ಸಾಲೇತರ) | 45 | 60 | 749 | 298 | 3070 | 238 | 1977 | 69 |
| **ರಾಜಸ್ವ ಕೊರತೆ** | **-1535** | **-4152** | **-1627** | **-3540** | **-1527** | **-1631** | **-1151** | **-538** |
| ಬಂಡವಾಳ ಸಂಚಯ | 6790 | 8900 | 8681 | 9406 | 11627 | 10602 | 11622 | 11873 |
| **ವಿತ್ತೀಯ ಕೊರತೆ** | **5211** | **4688** | **6305** | **5331** | **7030** | **8732** | **8493** | **11266** |
| ಒಟ್ಟು ಸಾಲ ಸಂಗ್ರಹಣೆ | 56074 | 54602 | 61418 | 59778 | 67504 | 68064 | 77103 | 79644 |
| ಬಡ್ಡಿ | 4366 | 4236 | 4818 | 4506 | 5278 | 4532 | 5578 | 5250 |
| ಸಾಲ ಸೇವೆಗಳು | 5320 | 5986 | 6117 | 5756 | 7085 | 6310 | 7782 | 7560 |
| ವೇತನ + ನಿವೃತ್ತಿ ವೇತನ + ಬಡ್ಡಿ | 13756 | 13278 | 16780 | 16156 | 20192 | 18572 | 20884 | 20056 |
| **ಒಟ್ಟು ಬಜೆಟ್ ಸಾಲಗಳು** | **845** | **242** | **720** | **103** | | | | |
| **ನಿವ್ವಳ ಬಜೆಟ್ ಸಾಲಗಳು** | **-146** | **-1246** | **-58** | **-1136** | **-679** | **-456** | **-697** | **-531** |
| ಸಂಚಿತ ಬಡ್ಡಿ | 5077 | 5299 | 5198 | 4888 | 5548 | 4785 | 5870 | 5429 |
| **ಸಂಚಿತ ರಾಜಸ್ವ ಕೊರತೆ** | **-824** | **-3089** | **-1247** | **-3158** | **-1258** | **-1389** | **-750** | **-259** |
| ಸಂಚಿತ ಬಂಡವಾಳ ರಚನೆ | 7635 | 9142 | 9401 | 9508 | 11627 | 10602 | 11622 | 11873 |
| **ಸಂಚಿತ ವಿತ್ತೀಯ ಕೊರತೆ** | **5064** | **3442** | **6247** | **4196** | **6350** | **8277** | **7796** | **10735** |
| ಸಂಚಿತ ಸಾಲ ಸಂಗ್ರಹಣೆ | 61263 | 59643 | 66149 | 63581 | 70847 | 71410 | 79794 | 82513 |
| **ಸಂಚಿತ ರಾಜಸ್ವ ಕೊರತೆ/ಜಿಎಸ್‌ಡಿಪಿ** | **-0.44%** | **-1.50%** | **-0.58%** | **-1.32%** | **-0.52%** | **-0.51%** | **-0.25%** | **-0.09%** |
| **ಪ್ರಸಕ್ತ ದರಗಳಲ್ಲಿ ಜಿಎಸ್‌ಡಿಪಿ** | **186757** | **205784** | **213503** | **240062** | **244043** | **270697** | **294952** | **298465** |
| ಹಣದುಬ್ಬರ | 4.00% | 4.00% | 5.00% | 5.00% | 8.00% | 4.00% | 4.00% | 4.00% |
| ಜಿಎಸ್‌ಡಿಪಿಯ ವಾರ್ಷಿಕ ವಾಸ್ತವ ಬೆಳವಣಿಗೆ | 7.00% | 7.00% | 8.00% | 8.00% | 7.00% | 5.65% | 6.00% | 5.77% |
| ಜಿಎಸ್‌ಡಿಪಿಗೆ ಶೇಕಡಾವಾರಿನಂತೆ ಅದರ ರಾಜಸ್ವ ಸ್ವೀಕೃತಿಗಳು | 19.21% | 18.27% | 19.09% | 17.14% | 19.36% | 15.99% | 16.41% | 15.55% |

## ಕೋಷ್ಟಕ – 3
## ವಿತ್ತೀಯ ಚೌಕಟ್ಟು

(ರೂ.ಗಳು ಕೋಟಿಗಳಲ್ಲಿ)

| ಬಾಬುಗಳು | 2006-07 ಅಂದಾಜು | 2006-07 ಲೆಕ್ಕ | 2007-08 ಅಂದಾಜು | 2007-08 ಲೆಕ್ಕ | 2008-09 ಅಂದಾಜು | 2008-09 ಲೆಕ್ಕ | 2009-10 ಅಂದಾಜು | 2009-10 ಪೂ.ಅಂ |
|---|---|---|---|---|---|---|---|---|
| ಇದರಲ್ಲಿ | | | | | | | | |
| ರಾಜ್ಯ ಒಡೆತನದ ತೆರಿಗೆ ರಾಜಸ್ವಗಳು | 12.07% | 11.32% | 12.50% | 10.83% | 13.06% | 10.21% | 11.09% | 9.83% |
| ತೆರಿಗೇತರ ರಾಜಸ್ವಗಳು | 2.19% | 1.99% | 0.87% | 1.40% | 0.79% | 1.17% | 0.72% | 0.84% |
| ಕೇಂದ್ರದಿಂದ ದೊರೆಯುವ ಸಂಪನ್ಮೂಲಗಳು – ವರ್ಗಾವಣೆ | 2.47% | 2.61% | 2.95% | 2.82% | 3.27% | 2.64% | 2.59% | 2.35% |
| – ಅನುದಾನಗಳು | 2.49% | 2.34% | 2.77% | 2.09% | 2.23% | 1.97% | 2.00% | 2.54% |
| ರಾಜಸ್ವ ವೆಚ್ಚ | 18.39% | 16.25% | 18.33% | 15.67% | 18.73% | 15.39% | 16.02% | 15.37% |
| ಇದರಲ್ಲಿ | | | | | | | | |
| ಬಡ್ಡಿ | 2.34% | 2.06% | 2.26% | 1.88% | 2.16% | 1.67% | 1.89% | 1.76% |
| ವೇತನಗಳು | 3.60% | 3.18% | 4.00% | 3.50% | 4.68% | 3.67% | 3.83% | 3.79% |
| ನಿವೃತ್ತಿ ವೇತನಗಳು | 1.43% | 1.21% | 1.60% | 1.35% | 1.43% | 1.52% | 1.36% | 1.17% |
| ಸಹಾಯಧನ (ಆಹಾರ,ಸಾರಿಗೆ, ವಸತಿ ಮತ್ತು ಕೈಗಾರಿಕೆ) | 0.93% | 0.97% | 1.18% | 1.40% | 0.61% | 0.54% | 0.66% | 0.58% |
| ವಿದ್ಯುತ್ ಸಹಾಯಧನ | 0.96% | 1.15% | 1.01% | 0.96% | 0.99% | 0.72% | 0.81% | 0.64% |
| ಯುಎಲ್‌ಬಿಗಳಿಗೆ ವರ್ಗಾವಣೆ | 0.82% | 0.80% | 0.89% | 0.80% | 1.23% | 0.88% | 0.92% | 0.79% |
| ಪ್ರಮುಖ ಒ ಮತ್ತು ಎಂ (ರಸ್ತೆಗಳು, ಕಟ್ಟಡಗಳು ಮತ್ತು ನೀರಾವರಿ) | 0.54% | 0.49% | 0.38% | 0.31% | 0.34% | 0.23% | 0.25% | 0.24% |
| ಇತರೆ ಓ ಮತ್ತು ಎಂ (ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಕೃಷಿ, ಅರಣ್ಯ) | 1.84% | 1.69% | 4.06% | 2.92% | 3.44% | 3.14% | 1.50% | 1.43% |
| ಆಡಳಿತಾತ್ಮಕ ವೆಚ್ಚ | 0.37% | 0.27% | 0.37% | 0.29% | 0.38% | 0.27% | 0.28% | 0.31% |
| ಇತರೆ ರಾಜಸ್ವ ವೆಚ್ಚ | 5.55% | 4.43% | 2.58% | 2.26% | 3.48% | 2.75% | 4.50% | 4.65% |
| **ರಾಜಸ್ವ ಕೊರತೆ** | **-0.82%** | **-2.02%** | **-0.76%** | **-1.47%** | **-0.63%** | **-0.60%** | **-0.39%** | **-0.18%** |
| ಬಂಡವಾಳ ಸ್ವೀಕೃತಿ (ಸಾಲೇತರ) | 0.02% | 0.03% | 0.35% | 0.12% | 1.26% | 0.09% | 0.67% | 0.02% |
| ಬಂಡವಾಳ ರಚನೆ ಮೇಲಿನ ವೆಚ್ಚ | 3.64% | 4.32% | 4.07% | 3.92% | 4.76% | 3.92% | 3.94% | 3.98% |
| **ವಿತ್ತೀಯ ಕೊರತೆ** | **2.79%** | **2.28%** | **2.95%** | **2.22%** | **2.88%** | **3.23%** | **2.88%** | **3.77%** |
| **ಬಜೆಟ್ ಸಾಲಗಳಿಲ್ಲದಿರುವುದು** | **0.45%** | **0.12%** | **0.34%** | **0.04%** | | | | |
| **ಸಂಚಿತ ರಾಜಸ್ವ ಕೊರತೆ** | **-0.44%** | **-1.50%** | **-0.58%** | **-1.32%** | **-0.52%** | **-0.51%** | **-0.25%** | **-0.09%** |
| ಸಂಚಿತ ಬಂಡವಾಳ ವೆಚ್ಚ | 4.09% | 4.44% | 4.40% | 3.96% | 4.76% | 3.92% | 3.94% | 3.98% |
| **ಸಂಚಿತ ವಿತ್ತೀಯ ಕೊರತೆ** | **2.71%** | **1.67%** | **2.93%** | **1.75%** | **2.60%** | **3.06%** | **2.64%** | **3.60%** |
| ಸಂಚಿತ ಸಾಲ ಸಂಗ್ರಹಣೆ | **32.80%** | **28.98%** | **30.98%** | **26.49%** | **29.03%** | **26.38%** | **27.05%** | **27.65%** |

13. ಮೇಲಿನ ಕೋಷ್ಟಕದಲ್ಲಿ ತೋರಿಸಲಾದಂತೆ, 2006–07ನೇ ಹಣಕಾಸು ವರ್ಷದಲ್ಲಿ ರಾಜಸ್ವ ಹೆಚ್ಚಳದ ಪರಿಸ್ಥಿತಿಯು 4,152 ಕೋಟಿ ರೂಪಾಯಿಗಳಷ್ಟು ಗರಿಷ್ಠ ಮಟ್ಟ ತಲುಪಿತು. ತದನಂತರ ವರ್ಷದಿಂದ ವರ್ಷಕ್ಕೆ ರಾಜಸ್ವ ಹೆಚ್ಚುವರಿಯ ಮೊಬಲಗು ಕ್ರಮೇಣ ಕಡಿಮೆಯಾಗಿದೆ. 2009–10ನೇ ಸಾಲಿನಲ್ಲಿ (ರಾಜಸ್ವ ಅಂದಾಜು) ರಾಜಸ್ವ ಹೆಚ್ಚಳವು 538 ಕೋಟಿ ರೂಪಾಯಿಗಳಿಗೆ ಇಳಿಯುವ ನಿರೀಕ್ಷೆ ಇದೆ. ಸರ್ಕಾರದ ಸಂಪನ್ಮೂಲಗಳ ಮೇಲಿನ ಒತ್ತಡ ಹಾಗೂ ಸಾಮಾಜಿಕ ವಲಯದ ವೆಚ್ಚದ ಹೆಚ್ಚಳದ ಕಾರಣದಿಂದ ಆ ಸಾಲಿನ ರಾಜಸ್ವ ಹೆಚ್ಚಳವು ಕಡಿಮೆಯಾಯಿತು. ವರ್ಷದ ಅವಧಿಯಲ್ಲಿ ಬಜೆಟ್‌ನಲ್ಲಿ ನೀಡಲಾದುದಕ್ಕಿಂತ ಹೆಚ್ಚುವರಿ ಮೊತ್ತವನ್ನು ಸಾಮಾಜಿಕ ಭದ್ರತೆ ವೇತನಗಳಿಗಾಗಿ, ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಹೆಚ್ಚಿಸಲಾದ ಸಹಾಯಧನಕ್ಕಾಗಿ ವ್ಯಯಿಸಲಾಗಿತ್ತು. ಅಲ್ಲದೆ ಪ್ರಸಕ್ತ ಸಾಲಿನಲ್ಲಿ, ರಾಜ್ಯದ ಉತ್ತರದ ಜಿಲ್ಲೆಗಳಲ್ಲಿ ಉಂಟಾದ ನೆರೆ ಹಾವಳಿಯಲ್ಲಿ ನೊಂದವರಿಗೆ ಪರಿಹಾರ ನೀಡಲು ಹಾಗೂ ಅವರ ಪುನರ್ವಸತಿಗಾಗಿ ವೆಚ್ಚ ಮಾಡಲಾಗಿದೆ. ಈ ಹೆಚ್ಚುವರಿ ವೆಚ್ಚವು ರಾಜ್ಯದ ರಾಜಸ್ವ ಶಿಲ್ಕಿನ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಬೀರಿದೆ. ಅಲ್ಲದೆ, ಗ್ರಾಹಕರ ಬೇಡಿಕೆಯನ್ನು ಉತ್ತೇಜಿಸುವುದಕ್ಕಾಗಿ ಕೇಂದ್ರವು ಪ್ರಕಟಿಸಿದ ಉತ್ತೇಜಕ ಪ್ಯಾಕೇಜಿನಿಂದಾಗಿ ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹಣೆ ಕೂಡ ಇಳಿಮುಖವಾಯಿತು. ಪರಿಣಾಮವಾಗಿ, ಭಾರತ ಸರ್ಕಾರದ ಆಯವ್ಯಯದಲ್ಲಿ ಕಲ್ಪಿಸಿದ 7,645 ಕೋಟಿ ರೂಪಾಯಿಗಳ ಬದಲಾಗಿ ರಾಜ್ಯ ಸರ್ಕಾರವು ಸುಮಾರು 7,000 ಕೋಟಿ ರೂಪಾಯಿಗಳನ್ನು ಮಾತ್ರ ಪಡೆಯುವ ಅಂದರೆ ಶೇಕಡಾ 10 ರಷ್ಟು ಕಡಿಮೆ ಹಣವನ್ನು ಪಡೆಯವ ನಿರೀಕ್ಷೆ ಇದೆ.

14. ರಾಜಸ್ವ ಹೆಚ್ಚಳದಲ್ಲಿನ ಇಳಿಕೆಯು ತನ್ನ ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಸರ್ಕಾರದ ಸಾಮರ್ಥ್ಯವನ್ನು ಕುಂದಿಸಿದೆ. ಆದಾಗ್ಯೂ, ಸರ್ಕಾರವು 2008–09 ಮತ್ತು 2009–10 ರಲ್ಲಿ ವಿತ್ತೀಯ ಕೊರತೆ ಮಿತಿಗಳನ್ನು ಹೆಚ್ಚಿಸುವ ಅವಕಾಶವನ್ನು ಬಳಸಿಕೊಂಡು ಮಾರುಕಟ್ಟೆ ಸಾಲಗಳನ್ನು ಪಡೆದು ತನ್ನ ಬಂಡವಾಳ ವೆಚ್ಚದ ಬದ್ಧತೆಗಳನ್ನು ಈಡೇರಿಸಿಕೊಂಡಿದೆ. ವಿವಿಧ

ವಿತ್ತೀಯ ಒತ್ತಡಗಳು ಇದ್ದರೂ, 2009–10ರ ಪರಿಷ್ಕೃತ ಅಂದಾಜುಗಳ ಪ್ರಕಾರ ಸರ್ಕಾರವು ಪ್ರಸಕ್ತ ಸಾಲಿನ ಆಯವ್ಯಯ ಅಂದಾಜುಗಳಿಗೆ ಹೋಲಿಸಿದಾಗ ಯೋಜನೇತರ ವೆಚ್ಚವನ್ನು 68 ಕೋಟಿ ರೂಪಾಯಿಗಳಷ್ಟು ಅಲ್ಪ ಪ್ರಮಾಣದ ಏರಿಕೆ ಮಾಡಲು ಸಾಧ್ಯವಾಗಿದೆ. ಪರಿಷ್ಕೃತ ಅಂದಾಜುಗಳ ಪ್ರಕಾರ ಸರ್ಕಾರವು, ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ಕಲ್ಪಿಸಿದ ಯೋಜನಾ ವೆಚ್ಚ ಬದ್ಧತೆಯನ್ನು ಭರಿಸಲು 1,187 ಕೋಟಿ ರೂಪಾಯಿಗಳಷ್ಟು ಕೊರತೆ ಉಂಟಾಗುವ ನಿರೀಕ್ಷೆಯಿದೆ. ಪರಿಷ್ಕೃತ ಅಂದಾಜಿನಲ್ಲಿ ವಿಧಾನ ಮಂಡಲದಲ್ಲಿ ಮಂಡಿಸಲಿರುವ ಪೂರಕ ಅಂದಾಜುಗಳಲ್ಲಿನ ವೆಚ್ಚದ ಬಾಬುಗಳ ಪರಿಣಾಮವೂ ಸೇರಿದೆ.

15. ಆಯವ್ಯಯ ಅಂದಾಜುಗಳೊಂದಿಗೆ ಹೋಲಿಸಿದಾಗ 3,383 ಕೋಟಿ ರೂಪಾಯಿಗಳಷ್ಟು ಸ್ವಂತ ತೆರಿಗೆ ರಾಜಸ್ವಗಳಲ್ಲಿನ ಒಟ್ಟಾರೆ ಕೊರತೆ ಇದ್ದರೂ, ಸರ್ಕಾರವು ವರ್ಷದ ಅವಧಿಯಲ್ಲಿ ತನ್ನ ಬಹುತೇಕ ಅಭಿವೃದ್ಧಿ ಪರ ಬದ್ಧತೆಗಳನ್ನು ಪೂರೈಸಲು ಸಫಲವಾಗಿದೆ. ಪ್ರಸಕ್ತ ಸಾಲಿನಲ್ಲಿ ತನ್ನ ಯೋಜನೇತರ ವೆಚ್ಚಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಸರ್ಕಾರವು ಕೈಗೊಂಡ ಅನೇಕ ಕಟ್ಟುನಿಟ್ಟಿನ ಕ್ರಮಗಳಿಂದ ಇದು ಸಾಧ್ಯವಾಗಿದೆ. ಹೊಸ ನೇಮಕಾತಿ, ಹೊಸ ವಾಹನ ಖರೀದಿ, ವಿದೇಶ ಪ್ರವಾಸ ಮತ್ತು ತರಬೇತಿ, ಪಂಚತಾರಾ ಹೋಟೆಲುಗಳಲ್ಲಿ ಸರ್ಕಾರದ ಕಾರ್ಯಕ್ರಮಗಳನ್ನು ನಡೆಸುವುದು ಮತ್ತು ವಿಮಾನಗಳಲ್ಲಿ ಬಿಸಿನೆಸ್ ದರ್ಜೆಯಲ್ಲಿ ಪ್ರಯಾಣ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. 2008–09ನೇ ಸಾಲಿನಲ್ಲಿ ಎಲ್ಲಾ ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು 58 ವರ್ಷಗಳಿಂದ 60 ವರ್ಷಗಳಿಗೆ ಹೆಚ್ಚಿಸಿರುವುದರಿಂದ ವರ್ಷದ ಅವಧಿಯಲ್ಲಿ ನಿವೃತ್ತಿ ವೇತನದ ವೆಚ್ಚ ಕಡಿಮೆಯಾಗಿದೆ. ನೌಕರರ ನಿವೃತ್ತಿಯು 2010–11ನೇ ಸಾಲಿನಿಂದ ಪ್ರಾರಂಭವಾಗುವುದು. ಆದ್ದರಿಂದ 2009–10ಕ್ಕೆ ಹೋಲಿಸಿದರೆ ಮುಂದಿನ ವರ್ಷ ನಿವೃತ್ತಿ ವೇತನ ವೆಚ್ಚವು ಗಣನೀಯವಾಗಿ ಹೆಚ್ಚುವ ನಿರೀಕ್ಷೆ ಇದೆ.

## ಅಧ್ಯಾಯ – 3

## ಸ್ಥೂಲ ಆರ್ಥಿಕ ದೃಷ್ಟಿಕೋನ

### ಎ) ರಾಜ್ಯದ ಒಟ್ಟು ಆಂತರಿಕ ಉತ್ಪನ್ನ

16. ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿವಿಧ ವಲಯಗಳು ನೀಡಿರುವ ಕೊಡುಗೆಯನ್ನು ಈ ಮುಂದಿನ ಕೋಷ್ಠಕ 4 ರಲ್ಲಿ ತೋರಿಸಲಾಗಿದೆ. ಸೇವಾ ವಲಯವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಪ್ರಮುಖ ಕೊಡುಗೆಯನ್ನು ನೀಡುವುದು ಮುಂದುವರೆದಿದೆ.

**ಕೋಷ್ಟಕ 4**

**ಮೂಲ ಕೈಗಾರಿಕೆಯಿಂದ ಆಂಶಿಕ ವೆಚ್ಚದಲ್ಲಿ (ಸ್ಥಿರ ಬೆಲೆಗಳು) ರಾಜ್ಯದ ಒಟ್ಟು ಆಂತರಿಕ ಉತ್ಪನ್ನ**

(ರೂ.ಗಳು ಕೋಟಿಗಳಲ್ಲಿ)

| ಉದ್ಯಮ | 2002–03 | 2003–04 | 2004–05 | 2005–06 | 2006–07 | 2007–08 | 2008–09 ಕ್ಷಿಪ್ರ ಅಂದಾಜು | 2009–10 ಮುಂಗಡ ಅಂದಾಜು |
|---|---|---|---|---|---|---|---|---|
| ಪ್ರಾಥಮಿಕ | 27107 | 24389 | 32056 | 38406 | 35977 | 41342 | 47671 | 50231 |
| ದ್ವಿತೀಯ | 31193 | 35034 | 42393 | 51847 | 60746 | 73492 | 78394 | 86514 |
| ತೃತೀಯ | 62589 | 71567 | 81777 | 93543 | 109062 | 125228 | 144631 | 161721 |
| **ಒಟ್ಟು** | **120889** | **130990** | **156226** | **183796** | **205784** | **240062** | **270697** | **298465** |
| ವಿವಿಧ ವಲಯಗಳ ಶೇಕಡಾವಾರು ಪಾಲು | | | | | | | | |
| ಪ್ರಾಥಮಿಕ | 22.4 | 18.6 | 20.5 | 20.9 | 17.5 | 17.2 | 17.6 | 16.8 |
| ದ್ವಿತೀಯ | 25.8 | 26.7 | 27.1 | 28.2 | 29.5 | 30.6 | 29.0 | 29.0 |
| ತೃತೀಯ | 51.8 | 54.6 | 52.3 | 50.9 | 53.0 | 52.2 | 53.4 | 54.2 |

ಮೂಲ: ಆರ್ಥಿಕ ಸಮೀಕ್ಷೆ 2009–10, ಅಂಕಿಅಂಶಗಳ ನಿರ್ದೇಶನಾಲಯ

### ಬಿ) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ

17. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಇತ್ತೀಚಿನ ಲಭ್ಯ ಅಂದಾಜುಗಳ ಪ್ರಕಾರ, 2009–10 ರಲ್ಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ನೈಜ ಬೆಳವಣಿಗೆಯನ್ನು

2008–09 ರಲ್ಲಿನ ಶೇ. 4.5 (ಸ್ಥಿರ ದರಗಳಲ್ಲಿ) ಕ್ಕೆ ಪ್ರತಿಯಾಗಿ 2009–10ನೇ ಸಾಲಿನಲ್ಲಿ ಶೇ. 5.5 (ಸ್ಥಿರ ದರಗಳು) ಆಗಬಹುದೆಂದು ಅಂದಾಜು ಮಾಡಲಾಗಿದೆ. ರಾಷ್ಟ್ರಮಟ್ಟಕ್ಕಿಂತ ರಾಜ್ಯದಲ್ಲಿ ಆರ್ಥಿಕ ನಿಧಾನಗತಿಯು ಎದ್ದುಕಾಣುತ್ತದೆ. ಇದು ಬಹುಶಃ ಮಾಹಿತಿ ತಂತ್ರಜ್ಞಾನ ಮತ್ತು ಗಣಿಗಾರಿಕೆಯ ರಫ್ತಿನ ಮೂಲಕ ಜಾಗತಿಕ ಆರ್ಥಿಕತೆಯೊಂದಿಗೆ ರಾಜ್ಯ ಆರ್ಥಿಕತೆಯ ಹೆಚ್ಚು ಸಮ್ಮಿಲನವಾದ ಕಾರಣದಿಂದ ಆಗಿರುತ್ತದೆ. ಎರಡೂ ವರ್ಷಗಳಲ್ಲಿ ಕೃಷಿ ವಲಯದ ಕಡಿಮೆ ಬೆಳವಣಿಗೆಯೂ ಸಹ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಒಟ್ಟಾರೆ ಬೆಳವಣಿಗೆಯ ಮೇಲೆ ಪ್ರಭಾವವನ್ನು ಬೀರಿದೆ.

18. ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಪರಿಷತ್ತಿನ ಭಾರತದ ಆರ್ಥಿಕ ಸ್ಥಿತಿ ಪುನರವಲೋಕನದಲ್ಲಿ ವಿವರಿಸಲಾದಂತೆ, ಬಾಹ್ಯ ಆರ್ಥಿಕ ದೃಷ್ಟಿಕೋನ ಮತ್ತು ರಾಷ್ಟ್ರೀಯ ಸ್ಥೂಲ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿದರೆ, 2010–11 ರಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯು ಶೇ. 8 ರ ಗತಿಯಲ್ಲಿ ವಾಸ್ತವಿಕವಾಗಿ ಬೆಳವಣಿಗೆಯನ್ನು ಹೊಂದಬಹುದೆಂದು ನಿರೀಕ್ಷಿಸಲಾಗಿದೆ. ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ, ಸತತ 13 ತಿಂಗಳುಗಳಿಗೂ ಹೆಚ್ಚಿನ ಅವಧಿಯ ಇಳಿಮುಖದ ಘಟ್ಟವನ್ನು ದಾಟಿ ನವೆಂಬರ್ 2009 ರಿಂದ ಅಭಿವೃದ್ಧಿಯ ಧನಾತ್ಮಕ ಬೆಳವಣಿಗೆಯನ್ನು ದಾಖಲಿಸಿರುವ ಖಾಸಗಿ ಬೇಡಿಕೆ, ಮಾರಾಟ ಸರಕುಗಳ ರಫ್ತು, ಹಿಂಗಾರು ಬೆಳೆಯ ಉತ್ತಮ ನಿರೀಕ್ಷೆ, ಅನುಕೂಲಕರವಾದ ಬಂಡವಾಳ ಮಾರುಕಟ್ಟೆಯ ಪರಿಸ್ಥಿತಿಗಳು ಹೆಚ್ಚಿನ ಬಂಡವಾಳ ಹೂಡಿಕೆಗಳು ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿನ ಹೆಚ್ಚಳ ಮುಂತಾದ ಪರಿಸ್ಥಿತಿಗಳ ಆಶಾದಾಯಕ ಸೂಚನೆಗಳಿಂದಾಗಿ ಮುಂದಿನ ವರ್ಷಾವಧಿಯಲ್ಲಿನ ಬೆಳವಣಿಗೆಯಲ್ಲಿ ಸುಧಾರಣೆಯಾಗುವ ಸಾಧ್ಯತೆಗಳು ಕಂಡುಬರುತ್ತವೆ.

19. ಪ್ರಸ್ತುತ ಬೆಲೆಗಳಲ್ಲಿ, ರಾಜ್ಯ ಆರ್ಥಿಕ ಸ್ಥಿತಿಯು, 2009–10 ರ ಅವಧಿಯಲ್ಲಿ ಅನುಕ್ರಮವಾಗಿ ಶೇ. 5.4, ಶೇ. 10.45 ಮತ್ತು ಶೇ. 10.3ರ ದರದಲ್ಲಿ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ವಲಯಗಳೊಂದಿಗೆ ಶೇ. 10.3 ರಷ್ಟು ಬೆಳವಣಿಗೆಯನ್ನು ಹೊಂದಬಹುದೆಂದು ನಿರೀಕ್ಷಿಸಲಾಗಿದೆ. 2010–11ರಲ್ಲಿನ ಹಣದುಬ್ಬರ ತಗ್ಗಿಸಬಹುದಾದ ಸಾಧ್ಯತೆಗಳನ್ನು ಗಮನಿಸಿದಾಗ, ಪ್ರಸ್ತುತ ಮಾರುಕಟ್ಟೆ ದರಗಳಲ್ಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ದರವು 2009–10 ರಲ್ಲಿನ 2,98,465 ಕೋಟಿ ರೂಪಾಯಿಗಳಿಗೆ ಹೋಲಿಸಲಾಗಿ ಪ್ರಸಕ್ತ ಮಾರುಕಟ್ಟೆ ದರಗಳಲ್ಲಿ 2010–11 ರಲ್ಲಿ 3,28,312 ಕೋಟಿ ರೂಪಾಯಿ ಆಗಬಹುದೆಂದು ಅಂದಾಜು ಮಾಡಲಾಗಿದೆ.

## ಸಿ) ಹಣದುಬ್ಬರದ ಪ್ರವೃತ್ತಿಗಳು

20. ಪೂರೈಕೆ ಕುರಿತ ಗಮನಾರ್ಹ ಅಂಶಗಳಿಂದಾಗಿ ವರ್ಷಾವಧಿಯಲ್ಲಿ ಹಣದುಬ್ಬರವು ಪ್ರಮುಖ ಆತಂಕದ ವಿಷಯವಾಗಿದೆ. ಹಣದುಬ್ಬರವು ಮೂಲತಃ ಆಹಾರ ಧಾನ್ಯಗಳ ಕಾರಣದಿಂದಾಗಿದ್ದು, ನೈರುತ್ಯ ಮಾರುತದಿಂದ ಸರಿಯಾಗಿ ಮಳೆಬಾರದೆ ಮುಂಗಾರು ಬೆಳೆಗಳ ಇಳುವರಿ ಕಡಿಮೆಯಾದ ಕಾರಣ ಪರಿಸ್ಥಿತಿಯು ಇನ್ನೂ ಉಲ್ಬಣಗೊಂಡಿದೆ.

21. ಪ್ರಸ್ತುತ ಆಹಾರ ಧಾನ್ಯಗಳು ಸೇರಿದಂತೆ ಸಗಟು ಬೆಲೆ ಸೂಚ್ಯಂಕದ ಹಣದುಬ್ಬರವು ಸುಮಾರು ಶೇಕಡಾ 8.5ರಷ್ಟಾಗಿದ್ದು, ಆಹಾರ ಧಾನ್ಯಗಳಿಂದಾದ ಹಣದುಬ್ಬರವು ಸುಮಾರು ಶೇ 18ರಷ್ಟಾಗಿದೆ. ಸಗಟು ಬೆಲೆ ಸೂಚ್ಯಂಕವು ವರ್ಷದ ಆರಂಭದಲ್ಲಿದ್ದ ಶೇ.0.7ರಿಂದ ಪ್ರಸ್ತುತ ಶೇ.8.5ಕ್ಕೆ ಏರಿಕೆಯಾಗಿದ್ದು, ಆಹಾರ ಉತ್ಪನ್ನಗಳ ಬೆಳೆಗಳ ಹೆಚ್ಚಳದಿಂದ ಉಂಟಾದ ಹಣದುಬ್ಬರವು ಒಟ್ಟಾರೆ ಹಣದುಬ್ಬರ ಪರಿಸ್ಥಿತಿಯನ್ನು ಕುರಿತಂತೆ ಒಂದರಿಂದೊಂದಕ್ಕೆ ಹಬ್ಬುವ ಪರಿಣಾಮವನ್ನು ತೋರಿ ಮಜೂರಿ ಬೆಲೆ ಪರಿಷ್ಕರಣೆಯನ್ನು ಚಾಲನೆಗೊಳಿಸುವ ನಿರೀಕ್ಷೆಗಳ ಮೂಲಕ ಇತರೆ ಆಹಾರೇತರ ಬಾಬುಗಳಿಗೂ ಹಬ್ಬುವ ಸೂಚನೆ ನೀಡುತ್ತಿದೆ. ವಸ್ತುಗಳ

ಪೂರೈಕೆಗೆ ಸಂಬಂಧಪಟ್ಟ ಅಡೆತಡೆಗಳನ್ನು ನಿವಾರಿಸುವುದು ಮುಂದಿನ ವರ್ಷದಲ್ಲಿ ಕೈಗೊಳ್ಳತಕ್ಕ ಹಣದುಬ್ಬರ ನಿವಾರಣಾ ಕಾರ್ಯ ನೀತಿಯ ಪ್ರಮುಖ ಅಂಶವಾಗುತ್ತಿದೆ. ಆದಾಗ್ಯೂ, ಹಿಂಗಾರು ಬೆಳೆಗಳ ನಿರೀಕ್ಷೆಯು ಆಶಾದಾಯಕವಾಗಿದ್ದು, ಆಹಾರಧಾನ್ಯಗಳು, ತರಕಾರಿಗಳು ಮತ್ತು ಕೆಲವು ಹೊಸ ಬೆಳೆಗಳ ಆಗಮನ ಹಣದುಬ್ಬರದ ಕೆಲವು ಒತ್ತಡಗಳನ್ನು ನಿವಾರಿಸಬಹುದು.

**ಡಿ) ಕಾರ್ಯನೀತಿ ಪ್ರಯತ್ನಗಳು**

22. ಪ್ರಸ್ತುತ ಸ್ಥಗಿತಗೊಂಡಿರುವ ಅರ್ಥ ವ್ಯವಸ್ಥೆಯನ್ನು ಚುರುಕುಗೊಳಿಸಲು ಮತ್ತು 2004–05 ರಿಂದ 2007–08ರ ಅವಧಿಯಲ್ಲಿದ್ದ ಉನ್ನತ ಬೆಳವಣಿಗೆಯ ಪಥಕ್ಕೇ ಹಿಂತಿರುಗುವಂತೆ ನೋಡಿಕೊಳ್ಳಲು ಸರ್ಕಾರ ಅನುಸರಿಸತಕ್ಕ ಕಾರ್ಯತಂತ್ರವೆಂದರೆ, ಅರ್ಥವ್ಯವಸ್ಥೆಯ ವ್ಯವಸ್ಥಿತ ನಿರ್ಬಂಧಗಳನ್ನು ತೊಡೆದುಹಾಕಲು ಮೂಲ ಸೌಕರ್ಯಗಳನ್ನು ನಿರ್ಮಾಣ ಮಾಡಲು ಮತ್ತು ಸಾಮಾಜಿಕ ವಲಯಗಳಿಗೆ ಬೆಂಬಲ ನೀಡಲು ತನ್ನ ಗಮನ ಕೇಂದ್ರೀಕರಿಸಬೇಕು. ಮೂಲ ಸೌಕರ್ಯ ಒದಗಿಸಲು ರಾಜ್ಯ ಸರ್ಕಾರದ ಸಾಮರ್ಥ್ಯ ಮಿತವಾಗಿರುವ ಕಾರಣದಿಂದ ಹೂಡಿಕೆ ಸಂಗ್ರಹಣೆಗಾಗಿ ಸರ್ಕಾರವು, ಸಾರ್ವಜನಿಕ ಖಾಸಗಿ ಸಹಭಾಗಿತ್ವ ವಿಧಾನದ ಬಳಕೆಯನ್ನು ಹೆಚ್ಚು ಹೆಚ್ಚಾಗಿ ಮಾಡಿಕೊಳ್ಳತಕ್ಕದ್ದು.

## ಅಧ್ಯಾಯ – 4
## ರಾಜಸ್ವ ಸುಧಾರಣೆಗಳು ಮತ್ತು ಪರಿಕಲ್ಪನೆ

### ಪ್ರಮುಖ ಸ್ವಂತ ತೆರಿಗೆ ರಾಜಸ್ವಗಳ ಪ್ರವೃತ್ತಿ

23. 2002–03 ರಿಂದ 2006–07ನೇ ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರವು ಸ್ವಂತ ತೆರಿಗೆ ರಾಜಸ್ವಗಳಲ್ಲಿ ಸರಾಸರಿ ಒಟ್ಟು ವಾರ್ಷಿಕ ಬೆಳವಣಿಗೆ ದರವನ್ನು ಶೇಕಡಾ 20ಕ್ಕಿಂತ ಹೆಚ್ಚಿಗೆ ದಾಖಲಿಸಿತ್ತು. ಅದರ ಪರಿಣಾಮವಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿಯು ಗಣನೀಯವಾಗಿ ಸುಧಾರಣೆಯಾಯಿತು. ಆದಾಗ್ಯೂ, ಇತ್ತೀಚೆಗೆ ತೆರಿಗೆ ಪ್ರಯತ್ನವು ಅಂದರೆ ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇಕಡಾವಾರು ಅನುಪಾತವು 2006–07ರಲ್ಲಿ ಶೇಕಡಾ 11.3ಕ್ಕೆ ತಲುಪಿದ ತರುವಾಯ ನಿರಂತರ ಇಳಿಮುಖ ಧೋರಣೆಯನ್ನು ತೋರಿಸುತ್ತಿದೆ.




24. ಆರ್ಥಿಕ ನಿಧಾನಗತಿಯ ಕಾರಣದಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಭಾರಿ ಪ್ರಮಾಣದಲ್ಲಿ ಕುಸಿತ ಉಂಟಾಗಿದೆ. 2008–09ಹಾಗೂ 2009–10ನೇ ಸಾಲಿನ ಅವಧಿಯಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟು ಭಾರತದ ಹಾಗೂ ವಿಶ್ವದ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ

ಬೀರಿದಂತೆಯೇ ರಾಜ್ಯ ಸರ್ಕಾರದ ಮೇಲೂ ಪರಿಣಾಮ ಬೀರಿದೆ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿನ ನಿಧಾನಗತಿಯ ಕಾರಣದಿಂದಾಗಿ ತೆರಿಗೆ ಸಂಗ್ರಹದಲ್ಲಿ ಇಳಿಮುಖವಾಗಿದೆ. 2008–09 ಮತ್ತು 2009–10ನೇ ಸಾಲಿನಲ್ಲಿ (ಪ.ಅಂ.) ಪ್ರಮುಖ ಸ್ವಂತ ತೆರಿಗೆ ರಾಜಸ್ವಗಳು ಅನುಕ್ರಮವಾಗಿ ಶೇಕಡಾ 6.41 ಮತ್ತು ಶೇಕಡಾ 6.44 (ಪ.ಅಂ) ಹೆಚ್ಚಳವನ್ನು ದಾಖಲಿಸಿದೆ. 2008–09ನೇ ಸಾಲಿನ ಉತ್ತರಾರ್ಧದಲ್ಲಿ ಹಾಗೂ 2009–10ನೇ ಸಾಲಿನ ಪೂರ್ವಾರ್ಧದಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟು ಉಂಟಾಗಿದ್ದರೂ ರಾಜ್ಯ ಸರ್ಕಾರ ಈ ಎರಡೂ ವರ್ಷಗಳಲ್ಲಿ ಶೇಕಡಾ 6ರ ವರೆಗೆ ರಾಜಸ್ವ ಹೆಚ್ಚಳವನ್ನು ಸಾಧಿಸಿದೆ. ತೆರಿಗೆ ಆದಾಯದ ಬೆಳವಣಿಗೆ ದರದಲ್ಲಿ ಇಳಿಮುಖವು ತೆರಿಗೆ ನಿರ್ವಹಣೆ ಸುಧಾರಣೆ, ಸಂಗ್ರಹಣೆಯಲ್ಲಿ ದಕ್ಷತೆ ಹೆಚ್ಚಿಸುವುದು ಹಾಗೂ ತೆರಿಗೆ ದರಗಳನ್ನು ಪರಿಷ್ಕರಿಸುವುದು ಅಗತ್ಯವಿದೆ ಎಂಬುದನ್ನು ಸೂಚಿಸುತ್ತದೆ.

25. 2003–04ರಿಂದ 2008–09ನೇ ಸಾಲಿನ ಅವಧಿಯಲ್ಲಿ ಪ್ರಮುಖ ತೆರಿಗೆಗಳ ಅಡಿಯಲ್ಲಿ ರಾಜ್ಯ ರಾಜಸ್ವಗಳಲ್ಲಿನ ಬೆಳವಣಿಗೆಯನ್ನು ಕೋಷ್ಟಕ 5 ತೋರಿಸುತ್ತದೆ. ಕಳೆದ ಆರು ವರ್ಷಗಳ ಅವಧಿಯಲ್ಲಿ ವಾಣಿಜ್ಯ ತೆರಿಗೆ ಮತ್ತು ಮೋಟಾರು ವಾಹನ ತೆರಿಗೆಗಳು ಸುಮಾರು 1.0 ಏರಿಕೆಯೊಂದಿಗೆ ವಾಸ್ತವಿಕ ದರಗಳಲ್ಲಿ ಜಿಎಸ್‌ಡಿಪಿ ಯಷ್ಟೇ ದರದಲ್ಲಿ (ಸಿಎಜಿಆರ್) ಬೆಳವಣಿಗೆ ಹೊಂದಿದೆ. ಮುಂದ್ರಾಂಕ ಮತ್ತು ನೋಂದಣಿ ಸುಂಕವು ಇತ್ತೀಚಿನ ವರ್ಷಗಳಲ್ಲಿ ಋಣಾತ್ಮಕ ಏರಿಕೆ ತೋರಿದೆ ಮತ್ತು ಈ ಬಗ್ಗೆ ನಿಕಟ ಗಮನ ಹರಿಸಬೇಕು. ಅಬಕಾರಿ ಸುಂಕವು ಈ ಆರು ವರ್ಷಗಳಲ್ಲಿ 1.28ರ ಅಧಿಕ ಏರಿಕೆ ತೋರಿಸಿದೆ. ಆರ್ಥಿಕ ಬೆಳವಣಿಗೆಯ ನಿಧಾನಗತಿಯ ಪರಿಣಾಮದಿಂದಾಗಿ, 2009–10(ಪ.ಅಂ)ರ ಅವಧಿಯಲ್ಲಿ ನಾಲ್ಕು ಪ್ರಮುಖ ತೆರಿಗೆಗಳಿಂದ ಸಂಗ್ರಹಣೆಯು ಬಜೆಟ್ ಅಂದಾಜುಗಳಿಗೆ ಹೋಲಿಸಿದಾಗ 3,383ಕೋಟಿ ರೂಪಾಯಿಗಳಷ್ಟು ಕಡಿಮೆಯಾಗುವ ನಿರೀಕ್ಷೆ ಇದೆ.

**ಕೋಷ್ಟಕ–5**

**ವಾಸ್ತವಿಕ ಅಂಕಿ ಅಂಶಗಳು**

(ರೂ.ಗಳು ಕೋಟಿಗಳಲ್ಲಿ)

| ವರ್ಷ | ವಾಣಿಜ್ಯ ತೆರಿಗೆ | | | ಅಬಕಾರಿ | | |
|---|---|---|---|---|---|---|
| | ವಾಸ್ತವಿಕ ಅಂಕಿ ಅಂಶಗಳು | ಬೆಳವಣಿಗೆ ಪ್ರಮಾಣ | ಸ್ಥಿತಿ ಸ್ಥಾಪಕತೆ | ವಾಸ್ತವಿಕ ಅಂಕಿ ಅಂಶಗಳು | ಬೆಳವಣಿಗೆ ಪ್ರಮಾಣ | ಸ್ಥಿತಿ ಸ್ಥಾಪಕತೆ |
| 2003-04 | 7733 | 22.49% | 2.7 | 2334 | 11.45% | 1.4 |
| 2004-05 | 10057 | 30.05% | 2.1 | 2806 | 20.20% | 1.4 |
| 2005-06 | 11484 | 14.19% | 0.9 | 3397 | 21.07% | 1.4 |
| 2006-07 | 13714 | 19.42% | 1.9 | 4495 | 32.34% | 3.1 |
| 2007-08 | 15552 | 13.40% | 0.6 | 4767 | 6.03% | 0.2 |
| 2008-09 | 16645 | 7.03% | 0.5 | 5750 | 20.62% | 1.4 |
| 2009-10 RE | 17500 | 5.13% | 0.5 | 6735 | 17.14% | 1.5 |
| **CAGR** | **12.37%** | | **0.96*** | **16.35%** | | **1.28*** |
| ವರ್ಷ | ಮೋಟಾರು ವಾಹನ ತೆರಿಗೆ | | | ಸ್ಟಾಂಪು ಮತ್ತು ನೊಂದಣಿ | | |
| | ವಾಸ್ತವಿಕ ಅಂಕಿ ಅಂಶಗಳು | ಬೆಳವಣಿಗೆ ಪ್ರಮಾಣ | ಸ್ಥಿತಿ ಸ್ಥಾಪಕತೆ | ವಾಸ್ತವಿಕ ಅಂಕಿ ಅಂಶಗಳು | ಬೆಳವಣಿಗೆ ಪ್ರಮಾಣ | ಸ್ಥಿತಿ ಸ್ಥಾಪಕತೆ |
| 2003-04 | 800 | 18.41% | 2.2 | 1356 | 21.55% | 2.6 |
| 2004-05 | 983 | 22.86% | 1.6 | 1760 | 29.81% | 2.1 |
| 2005-06 | 1105 | 12.46% | 0.8 | 2212 | 25.70% | 1.7 |
| 2006-07 | 1374 | 24.34% | 2.4 | 3206 | 44.91% | 3.7 |
| 2007-08 | 1650 | 20.05% | 0.8 | 3409 | 6.33% | 0.3 |
| 2008-09 | 1681 | 1.88% | 0.1 | 2927 | -14.14% | -1.0 |
| 2009-10 RE | 1795 | 6.77% | 0.6 | 2687 | -8.19% | -0.7 |
| **CAGR** | **12.24%** | | **1.02*** | **10.27%** | | **0.95*** |

* ಕಳೆದ 7 ವರ್ಷಗಳ ಒಲಾಟವನ್ನು ಘಾತಮಾಪಕ ಪ್ರತ್ಯಾವರ್ತನೆಯನ್ನು ಬಳಸಿ ಕಂಡುಹಿಡಿಯಲಾಗಿದೆ

**ವಾಣಿಜ್ಯ ತೆರಿಗೆಗಳು**

26. ರಾಜ್ಯ ಸ್ವಂತ ತೆರಿಗೆ ರಾಜಸ್ವಗಳಿಗೆ ಹೆಚ್ಚಿನ ಕೊಡುಗೆ ವಾಣಿಜ್ಯ ತೆರಿಗೆಗಳಿಂದ ಬರುತ್ತದೆ. ಅದರಲ್ಲಿ ಸರಕುಗಳ ಮಾರಾಟದ ಮೇಲಿನ ತೆರಿಗೆಯು ಪ್ರಮುಖವಾದ ಅಂಶವಾಗಿದೆ. 2005–06ರ ನಂತರ ಸರಕುಗಳ ಮಾರಾಟದ ಮೇಲಿನ ಬಹುಪಾಲು ತೆರಿಗೆಗಳನ್ನು ಮೌಲ್ಯವರ್ಧಿತ ತೆರಿಗೆ ಪದ್ಧತಿಯಲ್ಲಿ ಸೇರಿದ್ದು, ದರದ ವಿನ್ಯಾಸದಲ್ಲಿ ಯಾವುದೇ ಮಾರ್ಪಾಡು ಮಾಡಿಕೊಳ್ಳದಿದ್ದಾಗ್ಯೂ ಮೌಲ್ಯವರ್ಧಿತ ತೆರಿಗೆಯಿಂದ ರಾಜಸ್ವದಲ್ಲಿನ ಬೆಳವಣಿಗೆಯು

ಸುಸ್ಥಿತವಾಗಿರುವುದೆಂದು ನಿರೀಕ್ಷಿಸಲಾಗಿತ್ತು. ಆದರೆ, ಜಾಗತಿಕ ಆರ್ಥಿಕ ಹಿಂಜರಿತವು ಎಲ್ಲಾ ವಲಯಗಳಲ್ಲಿನ ಸರಕು ಹಾಗೂ ಸೇವೆಗಳ ದೇಶಿಯ ಬಳಕೆ ಮೇಲೆ ಪರಿಣಾಮ ಬೀರಿದ ಕಾರಣದಿಂದ 2008–09ರ ಉತ್ತರಾರ್ಧದಲ್ಲಿನ ತೆರಿಗೆ ರಾಜಸ್ವಗಳ ಮೇಲಿನ ಋಣಾತ್ಮಕ ಪರಿಣಾಮವು 2009–10ರ ಪೂರ್ವಾರ್ಧದಲ್ಲೂ ಮುಂದುವರಿಯಿತು. ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಪ್ರಶಾಸಿತ ಬೆಲೆಗಳನ್ನು ಹೆಚ್ಚಿಸಿದ್ದರಿಂದ ಆದ ಪರಿಣಾಮವನ್ನು ತಗ್ಗಿಸುವುದಕ್ಕಾಗಿ ರಾಜ್ಯ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತನ್ನ ತೆರಿಗೆಯನ್ನು ಕಡಿಮೆ ಮಾಡಿತ್ತು. ನಂತರ 2008–09ರ ಕೊನೆಯ ತ್ರೈಮಾಸಿಕದಲ್ಲಿ ಹಾಗೂ 2009–10ರ ಮೊದಲ ತ್ರೈಮಾಸಿಕದಲ್ಲಿ ಕೇಂದ್ರವು ಬೆಲೆಗಳನ್ನು ಕಡಿಮೆ ಮಾಡಿತು. ಆದರೆ ರಾಜ್ಯ ಸರ್ಕಾರವು ತನ್ನ ತೆರಿಗೆ ಕಡಿತವನ್ನು ಹಿಂತೆಗೆದುಕೊಳ್ಳಲಿಲ್ಲ. ಹಾಗಾಗಿ ತೆರಿಗೆ ರಾಜಸ್ವದಲ್ಲಿ ಹೆಚ್ಚಿನ ಕೊರತೆ ಉಂಟಾಗಿರುವುದಕ್ಕೆ ಇದು ಕೂಡ ಕಾರಣವಾಗಿದೆ. ಅಲ್ಲದೆ, ಹಿಂದಿನ ವರ್ಷದಲ್ಲಿ ಜಿಎಸ್‌ಟಿ ಜಾರಿಗೆ ತರುವ ಸಿದ್ಧತೆಯಲ್ಲಿ ಕೇಂದ್ರ ಮಾರಾಟ ತೆರಿಗೆಯನ್ನು ಶೇಕಡಾ 4 ರಿಂದ ಶೇಕಡಾ 2ಕ್ಕೆ ಇಳಿಸಿರುವುದರಿಂದ ರಾಜಸ್ವದ ಮೇಲೆ ಪ್ರತಿಕೂಲ ಪರಿಣಾಮವಾಗಿದೆ. 2009–10ರ ಉತ್ತರಾರ್ಧದಲ್ಲಿ ಈ ಪ್ರವೃತ್ತಿಯು ಪರಿವರ್ತನೆಗೊಳ್ಳುತ್ತಿದ್ದು ಇತ್ತೀಚಿನ ತಿಂಗಳಲ್ಲಿ ರಾಜಸ್ವದಲ್ಲಿ ಸಾಧಾರಣ ಬೆಳವಣಿಗೆ ಕಂಡು ಬರುತ್ತಿದೆ.

27. ರಾಜಸ್ವ ಸಂಗ್ರಹಣೆ ಚುರುಕುಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ತೆರಿಗೆ ಸಂದಾಯ ಪಾಲನೆ ಸುಧಾರಣೆಗೆ ಮತ್ತು ತೆರಿಗೆ ನಿರ್ವಹಣೆಯಲ್ಲಿ ಹೆಚ್ಚು ಪರಿಣಾಮಕಾರಿ ಹಾಗೂ ದಕ್ಷತೆಯನ್ನು ಸಾಧಿಸಲು ಸೂಕ್ತ ಕ್ರಮ ಕೈಗೊಳ್ಳುತ್ತಿದೆ. ವಿದ್ಯುನ್ಮಾನ ರಿಟರ್ನ್ಸ್ ಸಲ್ಲಿಸುವಿಕೆ, ವಿದ್ಯುನ್ಮಾನ ತೆರಿಗೆ ಸಂದಾಯ ಮತ್ತು ರಿಟರ್ನ್ಸ್‌ಗಳ ಹಾಗೂ ಸರಕುಗಳ ಚಲನವಲನವನ್ನು ವಿದ್ಯುನ್ಮಾನ ಮೂಲಕ ತಡೆಹಿಡಿದು ಪರಿಶೀಲನೆ ಮಾಡುವುದು – ಇವುಗಳನ್ನು ಜಾರಿಗೆ ತರಲಾಗುವುದು. ತಪ್ಪದೆ ತೆರಿಗೆ ಸಂದಾಯ ಮಾಡುವಂತೆ ನೋಡಿಕೊಂಡು ಹೆಚ್ಚು ಆದಾಯ ತರುವಂಥ ತೆರಿಗೆ ಬುನಾದಿಯನ್ನು ಹೊಂದಲು ಸಹ ಕ್ರಮ ಕೈಗೊಳ್ಳಲಾಗುತ್ತದೆ. ಜನತೆ ತಪ್ಪದೆ ಖುದ್ದಾಗಿ ತೆರಿಗೆ

ಸಂದಾಯ ಮಾಡುವ ಪ್ರವೃತ್ತಿಯನ್ನು ಹೆಚ್ಚಿಸುವುದಕ್ಕಾಗಿ ವಿವಿಧ ಮಟ್ಟಗಳಲ್ಲಿ ವ್ಯಾಖ್ಯಾನಿಸುವ ಸಮಸ್ಯೆಗಳನ್ನು ತಗ್ಗಿಸುವುದಕ್ಕೆ ಮತ್ತು ಹಿತಕರ ವಾತಾವರಣವನ್ನು ಒದಗಿಸುವುದಕ್ಕೆ ಸೂಕ್ತ ಕಾರ್ಯತಂತ್ರವನ್ನು ರೂಪಿಸಲಾಗಿದೆ. ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಸಾಮರ್ಥ್ಯವನ್ನು ಹೆಚ್ಚಿಸಲು ಸಮಗ್ರ ಸಾಮರ್ಥ್ಯ ರೂಪಣ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ.

28. ಪ್ರಸ್ತಾಪಿತ ಸರಕು ಮತ್ತು ಸೇವೆಗಳ (ಜಿಎಸ್‌ಟಿ) ತೆರಿಗೆಯ ಮೇಲಿಂದ ಮೇಲೆ ಬೀಳುವ ತೆರಿಗೆಯು ಪರಿಣಾಮವನ್ನು ತೊಡೆದುಹಾಕುವುದಕ್ಕೆ, ದೇಶದಲ್ಲಿನ ಪರೋಕ್ಷ ತೆರಿಗೆ ವ್ಯವಸ್ಥೆಯ ಸಮಗ್ರ ಸುಧಾರಣೆಗೆ ತುಂಬಾ ಅವಶ್ಯಕವಾಗಿದೆ. ಇದರಿಂದ ತೆರಿಗೆಗಳ ಬಾಹುಳ್ಯತೆ ಕಡಿಮೆಯಾಗುತ್ತದೆ ಮತ್ತು ಅನುಪಾಲನಾ ವೆಚ್ಚ ಕೂಡ ಕಮ್ಮಿಯಾಗುತ್ತದೆ. ಸರಕು ಮತ್ತು ಸೇವೆಗಳ ತೆರಿಗೆಯು ಮಧ್ಯಮಾವಧಿಗೆ ಕೊರತೆಯಾಗಿ ಸ್ವಲ್ಪ ಮಟ್ಟಿನ ರಾಜಸ್ವ ನಷ್ಟವಾದರೂ ದೀರ್ಘಾವಧಿಯಲ್ಲಿ ಎಲ್ಲಾ ಹಿತಾಸಕ್ತಿದಾರರಿಗೂ ಲಾಭವಾಗುವ ಸಂಭವವಿದೆ. ಈ ಸಂದರ್ಭದಲ್ಲಿ, ರಾಜ್ಯ ಸರ್ಕಾರದ ಪ್ರಮುಖ ಆತಂಕವೆಂದರೆ, ಎಲ್ಲಾ ರಾಜ್ಯಗಳ ಒಟ್ಟು ಆಧಾರದ ಮೇಲೆ ಕೈಗೊಳ್ಳಲು ಪ್ರಸ್ತಾವಿಸಿದಂಥ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆಗಾಗಿನ ರಾಜಸ್ವ ತಟಸ್ಥ ದರಕ್ಕೆ ಸಂಬಂಧಿಸಿದುದಾಗಿರುತ್ತದೆ. ಕರ್ನಾಟಕವು, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರಿನಂತೆ ಅತ್ಯಂತ ಹೆಚ್ಚಿನ ತೆರಿಗೆ ಸಂಗ್ರಹಣೆಯನ್ನು ಸಾಧಿಸಿ, ವ್ಯಾಟ್ ಸಂದರ್ಭದಲ್ಲಿ ಅನುಭವವಾದಂತೆ ಮಧ್ಯಮಾವಧಿಯಲ್ಲಿ ರಾಜ್ಯದ ಏಕರೂಪದ ಸರಕು ಮತ್ತು ಸೇವೆಗಳ ತೆರಿಗೆ ದರದಡಿಯಲ್ಲಿ ರಾಜಸ್ವ ನಷ್ಟ ಉಂಟಾಗುವ ಸಂಭವವಿದೆ.

29. ರಾಜ್ಯ ಹಣಕಾಸು ಸಚಿವರ ಅಧಿಕಾರಯುತ ಸಮಿತಿಯು ರಾಜ್ಯಗಳು, ಕೇಂದ್ರ ಮತ್ತು ಇತರೆ ಹಿತಾಸಕ್ತಿದಾರರಿಗೆ ಸಂಬಂಧಿಸಿದ ಎಲ್ಲಾ ವಿವಾದಗಳನ್ನು ಪರಿಹರಿಸುವುದಕ್ಕೆ ಕಳೆದ ವರ್ಷ ಮತ್ತು ಈ ವರ್ಷದಲ್ಲಿ ಸಭೆ ಸೇರಿರುತ್ತದೆ. ಜಿಎಸ್‌ಟಿಯ ಕೆಲವೊಂದು ಬಹುಮುಖ್ಯವಾದ

ವಿವಾದಗಳಲ್ಲಿ ರಾಜ್ಯಗಳು ಮತ್ತು ಕೇಂದ್ರಗಳ ನಡುವೆ ಒಮ್ಮತಾಭಿಪ್ರಾಯ ಮೂಡದೇ ಇದ್ದರೂ ಸಂಭಾವ್ಯ ವಿಸ್ತೃತ ವಿನ್ಯಾಸ ಹೇಗಿರುತ್ತದೆ ಎಂಬುದು ದೊರೆತಿದೆ. ಇದು ಹೊಸ ತೆರಿಗೆ ವ್ಯವಸ್ಥೆಯ ಅನುಷ್ಠಾನಕ್ಕೆ ಆಡಳಿತಾತ್ಮಕ ರಚನೆಗಳು ಮತ್ತು ಪ್ರಕ್ರಿಯೆಗಳ ಅಭಿವೃದ್ಧಿಯಲ್ಲಿ ಉಪಯೋಗವಾಗುತ್ತದೆ. ಮೂಲತಃ ಏಪ್ರಿಲ್ 2010ರಲ್ಲಿ ಜಾರಿಗೆ ತರಬೇಕಾಗಿದ್ದ ಸರಕು ಮತ್ತು ಸೇವೆಗಳ ತೆರಿಗೆಯಯನ್ನು ಜಾರಿಗೆ ತರುವಲ್ಲಿ ಆಗುತ್ತಿರುವ ವಿಳಂಬವನ್ನು ಇದರ ಅನುಷ್ಠಾನದಲ್ಲಿ ಎದುರಿಸಬೇಕಾದ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ತನ್ನನ್ನು ಸಜ್ಜುಗೊಳಿಸಿಕೊಳ್ಳುವುದಕ್ಕೆ ರಾಜ್ಯ ಸರ್ಕಾರವು ಬಳಸಿಕೊಳ್ಳುತ್ತಿದೆ.

**ರಾಜ್ಯ ಅಬಕಾರಿ**

30. ತನ್ನ ಜಾರಿ ಕ್ರಮಗಳನ್ನು ಬದಲಾಯಿಸಿಕೊಂಡು ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದದ್ದರಿಂದ ರಾಜ್ಯದಲ್ಲಿನ ಅಬಕಾರಿ ಆದಾಯವನ್ನು ಇನ್ನೂ ಚೆನ್ನಾಗಿ ಸಂಗ್ರಹಿಸುವುದು ಸಾಧ್ಯವಾಗಿದೆ. ಕರ್ನಾಟಕ ರಾಜ್ಯ ಪಾನೀಯ ನಿಗಮ (ಕರಾಪಾನಿ)ವು ನಿರ್ವಹಿಸುತ್ತಿರುವ ಕ್ಯಾನಲೈಸ್ಡ್ ವಿತರಣಾ ವ್ಯವಸ್ಥೆಯ ಗಣಕೀಕರಣವು ಪೂರ್ಣಗೊಂಡಿದೆ. ನಂತರ, ಅಬಕಾರಿ ಇಲಾಖೆಯ ಗಣಕೀಕರಣವನ್ನು ತೆಗೆದುಕೊಳ್ಳಲಾಗಿದೆ. ಇದು ಕೆಎಸ್‌ಬಿಸಿಎಲ್‌ನಲ್ಲಿರುವ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯೊಂದಿಗೆ ಇಲಾಖೆಯು ಅನುರೂಪವಾಗಿರುವಂತೆ ಮಾಡುವುದೇ ಅಲ್ಲದೆ ಅಪರಾಧಗಳ ಅಂಕಿಅಂಶಗಳನ್ನು ಹೆಚ್ಚು ನಿಖರವಾಗಿ ಪುನರವಲೋಕನ ಮಾಡುವ ಅನುಕೂಲ ಒದಗಿಸುತ್ತದೆ. ರಾಜ್ಯದ ಅಬಕಾರಿ ಕಾರ್ಯನೀತಿಯಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಆದಂಥ ಬದಲಾವಣೆಗಳಿಗೆ ಸ್ಥಿರತೆಯನ್ನು ಒದಗಿಸಲು, 2010-11ನೇ ವರ್ಷವನ್ನು ಕ್ರೋಢೀಕರಣದ ವರ್ಷವಾಗುತ್ತದೆಂದು ಭಾವಿಸಲಾಗಿದೆ ಮತ್ತು ರಾಜಸ್ವದಲ್ಲಿನ ಸುಮಾರು ಶೇ. 10ರಷ್ಟು ಸಾಧಾರಣಾ ಹೆಚ್ಚಳವನ್ನು ಮುನ್ನಂದಾಜಿಸಲಾಗಿದೆ.

## ಮುದ್ರಾಂಕ ಮತ್ತು ನೋಂದಣಿ

31. ಜಾಗತಿಕ ಆರ್ಥಿಕ ಸಂಕಷ್ಟದಿಂದಾಗಿ ಪ್ರಮುಖವಾಗಿ ಆಸ್ತಿಗಳ ಖರೀದಿ ಮತ್ತು ಮಾರಾಟಗಳಲ್ಲಿ ಗಣನೀಯ ಇಳಿಕೆಯಾದ ಕಾರಣದಿಂದ ರಾಜ್ಯ ಸರ್ಕಾರದ ಈ ಆದಾಯದ ಮೂಲಕ್ಕೆ ಪೆಟ್ಟು ಬಿದ್ದಿದೆ. 2008–09ನೇ ಸಾಲಿನಲ್ಲಿ ಶೇ. 14ರಷ್ಟು ನಕಾರಾತ್ಮಕ ಬೆಳವಣಿಗೆಯಾಗಿರುತ್ತದೆ. ರಾಜ್ಯ ಸರ್ಕಾರ ಸ್ಥಿರಾಸ್ತಿ ಮಾರುಕಟ್ಟೆಗೆ ಉತ್ತೇಜನ ನೀಡುವುದಕ್ಕಾಗಿ ತನ್ನ ಕಡೆಯಿಂದ ಮುದ್ರಾಂಕ ಶುಲ್ಕದಲ್ಲಿ ಶೇ. 7.5ರಿಂದ ಶೇ. 6ಕ್ಕೆ ಅಂದರೆ ಶೇ. 1.5ರಷ್ಟು ಇಳಿಕೆಯನ್ನು ಘೋಷಿಸಿದೆ. ಈ ಇಳಿಕೆ ಮತ್ತು ಬೇಡಿಕೆಯ ಸಾಮಾನ್ಯ ಕೊರತೆ ಕಾರಣದಿಂದಾಗಿ 2009–10 (ಪಅಂ) ನೇ ಸಾಲಿನಲ್ಲಿ ಬೆಳವಣಿಗೆಯು ಶೇ. 8.19ರಷ್ಟು ನಕಾರಾತ್ಮಕವಾಗುವುದೆಂದು ನಿರೀಕ್ಷಿಸಲಾಗಿದೆ.

32. ಕೈಗಾರಿಕೆ ಮತ್ತು ರಿಯಲ್ ಎಸ್ಟೇಟ್‌ಗಳಲ್ಲಿನ ಹೂಡಿಕೆಗಾಗಿನ ಸಾಂಸ್ಥಿಕ ಹಣಕಾಸಿನ ಲಭ್ಯತೆಯು ಕಳೆದ ಎರಡು ತ್ರೈಮಾಸಿಕಗಳಲ್ಲಿ ಹೆಚ್ಚಾಗಿರುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಸಕ್ರಿಯ ನೀತಿ ಉಪಕ್ರಮಗಳಿಂದ ಈ ವ್ಯವಸ್ಥೆಯಲ್ಲಿನ ಧನಾನುಕೂಲತೆಯನ್ನು ಹೆಚ್ಚಿಸಿರುತ್ತವೆ. ಉಕ್ಕು, ಸಿಮೆಂಟ್ ಮೊದಲಾದ ಸಂಬಂಧಪಟ್ಟ ವಲಯಗಳೂ ಸಹ ಬೇಡಿಕೆಯಲ್ಲಿನ ಹೆಚ್ಚಳವನ್ನು ಕಂಡಿವೆ. ರಿಯಲ್ ಎಸ್ಟೇಟ್ ಉದ್ಯಮವು, ಗ್ರಾಹಕ ಬೇಡಿಕೆಯಲ್ಲಿ ಏರಿಕೆಯುಂಟಾದ ಕಾರಣದಿಂದಾಗಿ ವಾಣಿಜ್ಯ ಮತ್ತು ವಸತಿ ಆಸ್ತಿಗಳ ಬೆಲೆಗಳಲ್ಲಿ ಸ್ಥಿರತೆಯನ್ನು ತೋರಿಸಿದೆ. ಇದು ಕಳೆದ ತ್ರೈಮಾಸಿಕದ ಅವಧಿಯಲ್ಲಿ ತೆರಿಗೆ ರಾಜಸ್ವಗಳಲ್ಲಿ ಚೇತರಿಕೆ ಮುಖಾಂತರ ವ್ಯಕ್ತವಾಗಿದೆ. 2010–11ನೇ ಸಾಲಿನಿಂದ ಸಂಗ್ರಹಣೆಗಳು ಗಣನೀಯವಾಗಿ ಸುಧಾರಣೆಗೊಂಡು ಸಂಕಷ್ಟಕ್ಕೆ ಮೊದಲಿದ್ದ ಸುಮಾರು ಶೇ. 20ರ ಬೆಳವಣಿಗೆ ದರಗಳನ್ನು ದಾಖಲಿಸಬಹುದೆಂದು ನಿರೀಕ್ಷಿಸಲಾಗಿದೆ.

33. ನೋಂದಣಿ ಸೇವೆಗಳನ್ನು ಹೆಚ್ಚು ನಾಗರಿಕ ಕೇಂದ್ರಿತಗೊಳಿಸುವುದಕ್ಕಾಗಿ ಮತ್ತು ಸಂವಾದಿ ಇಲಾಖೆಗಳ ನಡುವೆ ಅಂತರ್ ಕಾರ್ಯಾಚರಣೆಗೆ ಸಾಧ್ಯವಾಗುವಂತೆ ಮಾಡುವುದಕ್ಕಾಗಿ 2010–11ನೇ ಸಾಲಿನಲ್ಲಿ ಈ ಮುಂದಿನ ಧ್ಯೇಯಗಳೊಂದಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ನೂತನ ಕಾವೇರಿ ಯೋಜನೆಯನ್ನು ರೂಪಿಸಲಾಗಿದೆ. ಅವುಗಳೆಂದರೆ:

(ಎ)ಸಾರ್ವಜನಿಕರಿಗೆ ಬೆಂಗಳೂರು 1, ಕರ್ನಾಟಕ 1, ನೆಮ್ಮದಿ ಕೇಂದ್ರಗಳು, ವೆಬ್ ಪೋರ್ಟಲ್‌ಗಳು, ಮೊದಲಾದವುಗಳ ಮೂಲಕ ಪ್ರಮಾಣಿತ ಪ್ರತಿಗಳು, ಋಣಭಾರ ಪ್ರಮಾಣ ಪತ್ರಗಳು ಮೊದಲಾದವುಗಳನ್ನು ನೀಡುವ ಅನುಕೂಲತೆ ಒದಗಿಸುವುದು.

(ಬಿ) ದಸ್ತಾವೇಜಿನ ನೋಂದಣಿಗೆ ಈಗ ತೆಗೆದುಕೊಳ್ಳುವ ಸರಾಸರಿ ಸಮಯವನ್ನು ಈಗಿನ 30 ರಿಂದ 10 ನಿಮಿಷಗಳಿಗೆ ಇಳಿಸುವುದು.

(ಸಿ) ಸಾರ್ವಜನಿಕರಿಗೆ ವೆಬ್ (ಜಾಲತಾಣದ) ಮೂಲಕ ಆಸ್ತಿಗಳ, ವಿವಾಹಗಳ ನೋಂದಣಿ, ಇ–ಸ್ಟಾಂಪ್ ಮಾರಾಟಗಳು, ಸಾರ್ವಜನಿಕ ಕುಂದುಕೊರತೆಗಳ ಪರಿಹಾರಗಳನ್ನು ಕುರಿತ ಮಾಹಿತಿ ದೊರೆಯುವಂತೆ ಮಾಡುವುದು.

(ಡಿ)ಪರಸ್ಪರ ಸಂಬಂಧಪಟ್ಟ ಇಲಾಖೆಗಳಾದ ಭೂಮಿ, ಖಜಾನೆ, ನಗರ ಸ್ಥಳೀಯ ಸಂಸ್ಥೆಗಳು, ಆದಾಯ ತೆರಿಗೆ ಇಲಾಖೆ, ಮಹಾಲೇಖಪಾಲರ ಕಚೇರಿ ಮೊದಲಾದವುಗಳ ನಡುವೆ ವಿದ್ಯುನ್ಮಾನ ವಿಧಾನದಲ್ಲಿ ಮಾಹಿತಿ ವಿನಿಮಯಕ್ಕೆ ಅನುಕೂಲ ಕಲ್ಪಿಸುವುದು.

(ಇ)ಸರ್ಕಾರಕ್ಕೆ ಬರಬೇಕಿರುವ ಆದಾಯದ ದುರುಪಯೋಗ ಅಥವಾ ಸೋರಿಕೆಯನ್ನು ತಡೆಗಟ್ಟುವುದು.

## <u>ಮೋಟಾರು ವಾಹನ ತೆರಿಗೆಗಳು</u>

34. ಸಾಲ ದೊರೆಯುವುದೇ ಪ್ರಮುಖ ಸಮಸ್ಯೆಯಾದುದರಿಂದಾಗಿ ಆರ್ಥಿಕ ಸಂಕಷ್ಟದ ಅವಧಿಯಲ್ಲಿ ಮೋಟಾರು ವಾಹನ ತೆರಿಗೆಗಳ ಸಂಗ್ರಹಣೆಯೂ ಸಹ ಕಷ್ಟವಾಯಿತು. ಸಂಕಷ್ಟದ ಅವಧಿಯಲ್ಲಿ ಮೋಟಾರು ವಾಹನಗಳ ಬೇಡಿಕೆ ತೀವ್ರವಾಗಿ ಕಡಿಮೆಯಾಯಿತು.

ಭಾರತ ಸರ್ಕಾರ, ಅಬಕಾರಿ ಸುಂಕದಲ್ಲಿ ಕಡಿತ ಮಾಡುವ ಮತ್ತು ಜೆಎನ್ ನರ್ಮ್ ಅಡಿಯಲ್ಲಿ ಬಸ್ಸುಗಳ ಖರೀದಿಗಾಗಿ ಹಣ ನೀಡಿಕೆಗಳಂಥ ಕ್ರಮಗಳನ್ನು ಕೈಗೊಳ್ಳುವ ಮೂಲಕ ಆಟೋಮೊಬೈಲ್ ಕೈಗಾರಿಕೆಗೆ ಉತ್ತೇಜನ ನೀಡುವುದಕ್ಕಾಗಿ ರಿಯಾಯಿತಿಗಳನ್ನು ನೀಡಿತು. ಭಾರತದ ಅರ್ಥ ವ್ಯವಸ್ಥೆಯು ಚೇತರಿಕೆಯ ಲಕ್ಷಣಗಳನ್ನು ತೋರಿಸುತ್ತಿರುವುದರಿಂದ ಮತ್ತು ಕರ್ನಾಟಕದ ಖರೀದಿ ಸಾಮರ್ಥ್ಯಕ್ಕೆ ಗಣನೀಯ ಕೊಡುಗೆ ನೀಡುವ ಮಾಹಿತಿ ತಂತ್ರಜ್ಞಾನ ವಲಯವು ಈಗ ನೇಮಕಾತಿ ಮಾಡಿಕೊಳ್ಳುವ ಸ್ಥಿತಿಯಲ್ಲಿರುವುದರಿಂದ ಮುಂದಿನ ವರ್ಷದ ತೆರಿಗೆ ಸಂಗ್ರಹಣೆಯು ಆಶಾದಾಯಕವಾಗಿ ಕಂಡುಬರುತ್ತಿದೆ.

35. ಸಾರಿಗೆ ಇಲಾಖೆಯು, ಗಣಕೀಕೃತ ಸೇವಾ ನೀಡಿಕೆ ವ್ಯವಸ್ಥೆಯನ್ನು ಜಾರಿಗೊಳಿಸುವುದನ್ನು ಕೈಗೊಂಡಿರುತ್ತದೆ. ಈ ಯೋಜನೆಯು, ಸುಮಾರು 82 ಲಕ್ಷಕ್ಕಿಂತ ಹೆಚ್ಚಿನ ವಾಹನಗಳು ಮತ್ತು ಸುಮಾರು 90 ಲಕ್ಷ ವಾಹನ ಬಳಕೆದಾರರುಗಳಿರುವ ರಾಜ್ಯದ 55 ಪ್ರಾದೇಶಿಕ ಸಾರಿಗೆ ಕಚೇರಿಗಳನ್ನು ಒಳಗೊಂಡಿರುತ್ತದೆ. ಇಲ್ಲಿಯವರೆಗೆ ವಾಹನಗಳ ಚಾಲನಾ ಪರವಾನಗಿಗಳು ಮತ್ತು ನೋಂದಣಿ ಪ್ರಮಾಣಪತ್ರಗಳಿಗಾಗಿ 8 ಲಕ್ಷ ಸ್ಮಾರ್ಟ್ ಕಾರ್ಡುಗಳನ್ನು ನೀಡಲಾಗಿದೆ. ಸ್ಮಾರ್ಟ್ ಕಾರ್ಡುಗಳನ್ನು ನೀಡುವುದರಿಂದ ನಕಲಿ ಚಾಲನಾ ಪರವಾನಗಿಗಳು ಮತ್ತು ನಕಲಿ ವಾಹನ ನೋಂದಣಿ ಪ್ರಮಾಣ ಪತ್ರಗಳ ಹಾವಳಿಯನ್ನು ತಡೆಗಟ್ಟಬಹುದೆಂದು ನಿರೀಕ್ಷಿಸಲಾಗಿದೆ. ಚಾಲನ ಪರವಾನಿಗೆಗಳು ಮತ್ತು ವಾಹನಗಳ ಅಂಕಿಅಂಶ ಮಾಹಿತಿಯು ಎಲ್ಲಾ ಇಲಾಖಾ ಕಚೇರಿಗಳಿಗೆ ಆನ್‌ಲೈನ್‌ನಲ್ಲಿ ಲಭ್ಯವಿರುತ್ತದೆ. ಅಲ್ಲದೆ, ಈ ದತ್ತಾಂಶವನ್ನು ರಾಷ್ಟ್ರೀಯ ದತ್ತಾಂಶ ಜಾಲಕ್ಕೆ (ಡೇಟಾ ಬೇಸ್) ಸೇರಿಸಿದರೆ ಇದು ರಾಷ್ಟ್ರಾದ್ಯಂತ ಎಲ್ಲಾ ಸಾರಿಗೆ ಇಲಾಖೆ ಕಚೇರಿಗಳಲ್ಲಿ ಲಭ್ಯವಾಗುತ್ತದೆ. ಈ ಸೌಲಭ್ಯವು, ವಿವಿಧ ಪ್ರಾಧಿಕಾರಿಗಳಿಂದ ತೀರುವಳಿಗಳನ್ನು ಪಡೆದುಕೊಳ್ಳುವುದರಲ್ಲಿ ಸಾರ್ವಜನಿಕರು ಎದುರಿಸುವ ಅನಗತ್ಯ ವಿಳಂಬಗಳನ್ನು ತಗ್ಗಿಸುತ್ತದೆ.

## ಪ್ರಮುಖ ಮತ್ತು ಅಪ್ರಮುಖ ಖನಿಜಗಳ ಮೇಲಿನ ಸ್ವಾಮ್ಯ ಶುಲ್ಕ (ರಾಯಲ್ಟಿ)

36. ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರವು ಪ್ರಮುಖ ಖನಿಜಗಳ ಮೇಲಿನ ಸ್ವಾಮ್ಯ ಶುಲ್ಕದ ದರಗಳನ್ನು ಪರಿಷ್ಕರಿಸಿರುತ್ತದೆ. ತತ್ಪರಿಣಾಮವಾಗಿ ಮುಂದಿನ ವರ್ಷದಲ್ಲಿ ಪಡೆಯುವ ಸ್ವಾಮ್ಯ ಶುಲ್ಕದಿಂದ ಬರುವ ರಾಜಸ್ವ ಮುನ್ನಂದಾಜುಗಳು ಶೇ.40ರಷ್ಟು ಹೆಚ್ಚಳವಾಗುವುದೆಂದು ನಿರೀಕ್ಷಿಸಲಾಗಿದೆ. ಈ ಖನಿಜಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾಗಿದ್ದರೂ ಸಹ ಕಳೆದ ಎರಡು ತ್ರೈಮಾಸಿಕಗಳಲ್ಲಿ ಬೆಲೆಗಳಲ್ಲಿ ಏರಿಕೆಯ ಪ್ರವೃತ್ತಿ ಕಂಡುಬಂದಿರುತ್ತದೆ. ಸರ್ಕಾರ 2009–10 (ಪಅಂ) ನೇ ಸಾಲಿನಲ್ಲಿ ಇಟ್ಟುಕೊಂಡಿದ್ದ ಸ್ವಾಮ್ಯ ಶುಲ್ಕಗಳಿಂದ ಪಡೆಯುವ 720 ಕೋಟಿ ರೂ.ಗಳ ಸಂಗ್ರಹಣೆಗಳ ಗುರಿಗೆ ಬದಲಾಗಿ 2010–11ರ ಅವಧಿಯಲ್ಲಿ 1,000 ಕೋಟಿ ರೂ.ಗಳ ಗುರಿಸಾಧಿಸುವ ಭರವಸೆ ಹೊಂದಿದೆ.

## ಜಮೀನು ಮಾರಾಟದಿಂದ ಸ್ವೀಕೃತಿಗಳು

37. ಮಧ್ಯಮಾವಧಿ ವಿತ್ತೀಯ ಯೋಜನೆ 2009–13 ಸರ್ಕಾರಿ ಜಮೀನುಗಳ ಮಾರಾಟದಿಂದ 1,900 ಕೋಟಿ ರೂ.ಗಳ ಆದಾಯ ನಿರೀಕ್ಷಿಸಿತ್ತು. ಆದರೆ ರಿಯಲ್ ಎಸ್ಟೇಟ್ ಮಾರುಕಟ್ಟೆ ಇಳಿಮುಖವಾಗಿ ಆಸ್ತಿ ಬೆಲೆಗಳು ಕುಸಿದ ಕಾರಣ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸುವುದಕ್ಕಾಗಿ ಸರ್ಕಾರಿ ಜಮೀನುಗಳನ್ನು ಮಾರಾಟ ಮಾಡುವುದನ್ನು ಪ್ರಸಕ್ತ ವರ್ಷದಲ್ಲಿ ಪರಿಗಣಿಸಲಿಲ್ಲ. ಆದ್ದರಿಂದ 1,800 ಕೋಟಿ ರೂ.ಗಳ ಕೊರತೆಯುಂಟಾಗುತ್ತದೆ. ಮಾರುಕಟ್ಟೆ ಪರಿಸ್ಥಿತಿಗಳು ಸುಧಾರಣೆಗೊಳ್ಳುತ್ತಿರುವ ಲಕ್ಷಣಗಳು ಕಂಡುಬರುತ್ತಿರುವುದರಿಂದ ಮುಂದಿನ ವರ್ಷ ಭೂ ಮಾರಾಟದಿಂದ ಹೆಚ್ಚು ಹಣ ಪಡೆಯಬಹುದೆಂಬ ನಿರೀಕ್ಷೆ ಇದೆ. ಇದರಿಂದ 2010–11ರಲ್ಲಿ 2,800 ಕೋಟಿ ಗುರಿ ಇರಿಸಿಕೊಳ್ಳಲಾಗಿದೆ.

# ಅಧ್ಯಾಯ – 5

## ವೆಚ್ಚ ನಿರ್ವಹಣೆ ಮತ್ತು ಪರಿಕಲ್ಪನೆ

38. ವೆಚ್ಚದ ಸ್ವರೂಪವನ್ನು ಸುಧಾರಿಸುವ ತನ್ನ ಕಾರ್ಯತಂತ್ರದ ಭಾಗವಾಗಿ ಸರ್ಕಾರವು ಸಾಮಾನ್ಯ ಸೇವೆಗಳ ಮೇಲಿನ ವೆಚ್ಚವನ್ನು ನಿರ್ಬಂಧಿಸಿ ಸಾಮಾಜಿಕ ಸೇವೆಗಳಿಗೆ ವೆಚ್ಚಗಳನ್ನು ಹೆಚ್ಚಿಸುವುದಕ್ಕಾಗಿ ನಿರಂತರ ಪ್ರಯತ್ನಗಳನ್ನು ಮಾಡುತ್ತಿದೆ. ವೆಚ್ಚದ ಗುಣಮಟ್ಟ ಮತ್ತು ಹೆಚ್ಚಿಸಿದ ವೆಚ್ಚಗಳ ಪ್ರತಿಫಲ ಏನು ಎಂಬುದು ಈಗಲೂ ಸಹ ಪ್ರಮುಖ ಸವಾಲಾಗಿದೆ. ಕಳೆದ ಏಳು ವರ್ಷಗಳ ಅವಧಿಯಲ್ಲಿ ಸಾಮಾನ್ಯ, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಮೇಲಿನ ಸರ್ಕಾರದ ವೆಚ್ಚದ ಪ್ರವೃತ್ತಿಗಳನ್ನು ಮುಂದಿನ ಕೋಷ್ಟಕ ಮತ್ತು ನಕ್ಷೆಯಲ್ಲಿ ತೋರಿಸಲಾಗಿದೆ.

**ಕೋಷ್ಟಕ –6**

**ಸೇವೆಗಳ ಮೇಲಿನ ವೆಚ್ಚ**

(ರೂ.ಗಳು ಕೋಟಿಗಳಲ್ಲಿ)

| ಸೇವೆಗಳು | | 2003-04 | 2004-05 | 2005-06 | 2006-07 | 2007-08 | 2008-09 | 2009-10 ಪೂ.ಅಂ |
|---|---|---|---|---|---|---|---|---|
| ಸಾಮಾನ್ಯ ಸೇವೆಗಳು | ರಾಜಸ್ವ | 9039 | 9900 | 10036 | 10419 | 10872 | 12276 | 13451 |
| | ಬಂಡವಾಳ | 128 | 136 | 218 | 321 | 339 | 475 | 411 |
| | ಸಾಲ | 0 | 0 | 0 | 0 | 0 | 0 | 0 |
| | ಒಟ್ಟು | **9168** | **10036** | **10254** | **10740** | **11211** | **12751** | **13862** |
| ಸಾಮಾಜಿಕ ಸೇವೆಗಳು | ರಾಜಸ್ವ | 6965 | 7723 | 8899 | 10937 | 13124 | 15873 | 19649 |
| | ಬಂಡವಾಳ | 427 | 486 | 1105 | 1293 | 2148 | 2555 | 2814 |
| | ಸಾಲ | 256 | 239 | 143 | 326 | 595 | 173 | 800 |
| | ಒಟ್ಟು | **7649** | **8448** | **10147** | **12555** | **15866** | **18601** | **23264** |
| ಆರ್ಥಿಕ ಸೇವೆಗಳು | ರಾಜಸ್ವ | 4652 | 6511 | 7947 | 10440 | 11453 | 11137 | 10398 |
| | ಬಂಡವಾಳ | 2474 | 4051 | 4499 | 6929 | 6162 | 6840 | 7696 |
| | ಸಾಲ | 755 | 373 | 157 | 31 | 160 | 558 | 152 |
| | ಒಟ್ಟು | **7880** | **10935** | **12603** | **17401** | **17776** | **18534** | **18245** |




39. ಸಾಮಾಜಿಕ ಸೇವೆಗಳ ಮೇಲಿನ ವೆಚ್ಚದ ಜಿಎಸ್‌ಡಿಪಿಯ ಶೇಕಡಾವಾರು 2003–04ರಲ್ಲಿ ಇದ್ದ ಶೇ.6.33ರಿಂದ 2009–10ರಲ್ಲಿ (ಪರಿಷ್ಕೃತ ಅಂದಾಜು) ಶೇ.7.87ರ ವರೆಗೆ ಹೆಚ್ಚಾಗಿದೆ. ಆರ್ಥಿಕ ಸೇವೆಗಳ ಮೇಲಿನ ವೆಚ್ಚವು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸ್ಥಿರವಾಗಿ ಉಳಿದಿದೆ. ಸಾಮಾನ್ಯ ಸೇವೆಗಳ ಮೇಲಿನ ವೆಚ್ಚದಲ್ಲಿನ ಬೆಳವಣಿಗೆಯನ್ನು ಬಹಳಷ್ಟು ನಿಯಂತ್ರಿಸಲಾಗಿದೆ.

40. 2009–10ರ ಅವಧಿಯಲ್ಲಿ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚದಲ್ಲಿ ಶೇ.21.3ರ ವರೆಗಿನ ಹೆಚ್ಚಳವನ್ನು ನಿರೀಕ್ಷಿಸಲಾಗಿದೆ. ಸಾಮಾಜಿಕ ಭದ್ರತೆ ವೇತನಗಳು, ಪ.ಜಾ, ಪ.ಪಂ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ನಗರಾಭಿವೃದ್ಧಿಯ ಕಾರ್ಯಕ್ರಮಗಳನ್ನು ಹೆಚ್ಚು ವ್ಯಾಪಕಗೊಳಿಸಿ ಸಾಮಾಜಿಕ ಸೇವೆಗಳ ಮೇಲೆ ಗಣನೀಯವಾಗಿ ಹೆಚ್ಚು ವೆಚ್ಚವನ್ನು ವಹಿಸಲು ರಾಜ್ಯ ಸರ್ಕಾರ ಉದ್ದೇಶಿಸುತ್ತದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದ 15 ಜಿಲ್ಲೆಗಳು ಹಿಂದೆಂದೂ ಕಂಡಿರದ ಪ್ರವಾಹಕ್ಕೆ ತುತ್ತಾಗಿದ್ದು, ಇದರಿಂದ ಲಕ್ಷಾಂತರ ಜನರು

ನಿರ್ವಸತಿಕರಾಗಿದ್ದಾರೆ. ಆ ಜಿಲ್ಲೆಗಳಲ್ಲಿ ಬೆಳೆದುನಿಂತ ಬೆಳೆಗಳು ಸಂಪೂರ್ಣವಾಗಿ ನಾಶವಾಗಿದ್ದು,. ಲಕ್ಷಾಂತರ ಮನೆಗಳು ನೆಲಸಮವಾಗಿವೆ. ಈ ಪ್ರಕೃತಿ ವಿಕೋಪದ ಪರಿಹಾರ ಕ್ರಮಗಳೂ ಸಹ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚದಲ್ಲಿ ಗಣನೀಯ ಏರಿಕೆಗೆ ಕಾರಣವಾಗಿವೆ. ಅಲ್ಲದೆ, ಹೊಸ ಶಾಲೆಗಳು, ಕಾಲೇಜುಗಳು, ಪಾಲಿಟೆಕ್ನಿಕ್‌ಗಳು, ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿದ ಕಾರಣದಿಂದ ಅಭಿವೃದ್ಧಿ ವೆಚ್ಚದಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆ. ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿನ ಉದ್ಯೋಗಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಅಗಾಧ ಮಾನವ ಶಕ್ತಿಯನ್ನು ಸಜ್ಜುಗೊಳಿಸುವುದಕ್ಕೆ ಗ್ರಾಮೀಣ ಯುವಕರಿಗೆ ತಾಂತ್ರಿಕ ಕೌಶಲ್ಯಗಳಲ್ಲಿ ತರಬೇತಿ ನೀಡುವ ಅಗತ್ಯತೆಯನ್ನು ಸರ್ಕಾರ ಮನಗಂಡಿದೆ. ಆದ್ದರಿಂದ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಮೇಲ್ದಜೇಗೆ ಏರಿಸಲಾಗಿದೆ. ಸರ್ಕಾರಿ ಉಪಕರಣಗಳು ಮತ್ತು ತರಬೇತಿ ಕೇಂದ್ರಗಳಿಗೆ ಹಂಚಿಕೆ ಹೆಚ್ಚಿಸಲಾಗಿದೆ ಹಾಗೂ ಕೈಗಾರಿಕೆಗಳಿಗೆ ಮೂಲ ಸೌಕರ್ಯ ಬೆಂಬಲವನ್ನು ಒದಗಿಸಲಾಗಿದೆ. ಅಲ್ಲದೆ, ಮುಖ್ಯಮಂತ್ರಿಯವರ ಸಣ್ಣ ಹಾಗೂ ಮಧ್ಯಮ ಪಟ್ಟಣ ಕಾರ್ಯಕ್ರಮಗಳ ರೂಪದಲ್ಲಿಯೇ ನಗರ ಅಭಿವೃದ್ಧಿಗಾಗಿ, II ನೇ ಹಾಗೂ IIIನೇ ಹಂತದ ನಗರಗಳಿಗಾಗಿ ವೆಚ್ಚದ ಏರ್ಪಾಟನ್ನು ಮಾಡಲಾಗಿದೆ.

41. ಕೆಲವು ಪ್ರಮುಖ ಅಭಿವೃದ್ಧಿ ವಲಯಗಳ ಮೇಲಿನ ವೆಚ್ಚದ ಏರ್ಪಾಟುಗಳನ್ನು ಈ ಕೆಳಗಿನ ಕೋಷ್ಟಕ 7 ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–7**

**ಕೃಷಿ ಮತ್ತು ತೋಟಗಾರಿಕೆ, ಗ್ರಾಮೀಣಾಭಿವೃದ್ಧಿಯ ಅಡಿಯಲ್ಲಿ ರೂಪರೇಖೆ**

(ರೂ.ಗಳು ಕೋಟಿಗಳಲ್ಲಿ)

| ವರ್ಷಗಳು | ಕೃಷಿ ಮತ್ತು ತೋಟಗಾರಿಕೆ | ಬೆಳವಣಿಗೆ | ಗ್ರಾಮೀಣಾ–ಭಿವೃದ್ಧಿ | ಬೆಳವಣಿಗೆ | ಆರೋಗ್ಯ | ಬೆಳವಣಿಗೆ | ಶಿಕ್ಷಣ | ಬೆಳವಣಿಗೆ |
|---|---|---|---|---|---|---|---|---|
| 2005-06 | 674 | -14.36% | 1639 | 23.60% | 1147 | 9.81% | 4793 | 11.83% |
| 2006-07 | 874 | 29.74% | 2016 | 23.00% | 1353 | 18.02% | 5631 | 17.50% |
| 2007-08 | 1264 | 44.62% | 2549 | 26.44% | 1769 | 30.75% | 6859 | 21.81% |
| 2008-09 | 1323 | 4.71% | 3104 | 21.78% | 1995 | 12.80% | 8600 | 25.38% |
| 2009-10 (RE) | 1458 | 10.15% | 3542 | 14.10% | 2183 | 9.42% | 8732 | 1.54% |
| 2010-11 (BE) | 2094 | 43.64% | 3442 | -2.82% | 2658 | 21.73% | 10505 | 20.31% |

ಈ ಕೆಳಗಿನ ವಿಭಾಗದಲ್ಲಿ ಆದ್ಯತೆಯ ಅಭಿವೃದ್ಧಿ ವಲಯಗಳಲ್ಲಿ ಕೈಗೊಂಡ ಕಾರ್ಯಚಟುವಟಿಕೆಗಳ ವಿವರಗಳನ್ನು ಸ್ಥೂಲವಾಗಿ ನಿರೂಪಿಸಲಾಗಿದೆ:–

ಎ) <u>ಕೃಷಿ</u>

42. ರಾಜ್ಯದ ಬಹುಪಾಲು ಜನರು ಕೃಷಿಯನ್ನು ಅವಲಂಬಿಸಿದ್ದು, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಈ ವಲಯದ ಕೊಡುಗೆಯು ಕಡಿಮೆಯಾಗುತ್ತಿರುವುದು ಗಂಭೀರವಾದ ವಿಷಯವಾಗಿದೆ. ಈ ವಲಯದಲ್ಲಿನ ಸಂಕಟವನ್ನು ಕಡಿಮೆ ಮಾಡುವುದಕ್ಕಾಗಿ ರಾಜ್ಯ ಸರ್ಕಾರ ಪ್ರಸಕ್ತ ಸಾಲಿನ ಅವಧಿಯಲ್ಲಿ ಈಗಾಗಲೇ ಜಾರಿಯಲ್ಲಿರುವ ಸಹಕಾರಿ ಬ್ಯಾಂಕುಗಳಿಂದ ಪಡೆಯುವ ಸಾಲಗಳ ಮೇಲಿನ ಬಡ್ಡಿ ಸಹಾಯಧನ ಯೋಜನೆ ಜೊತೆಗೆ ರೈತರು ವಾಣಿಜ್ಯ ಬ್ಯಾಂಕುಗಳಿಂದ ಪಡೆಯುವ ಬೆಳೆ ಸಾಲದ ಮೇಲೆ ಸಂದಾಯ ಮಾಡಬೇಕಾದ ಬಡ್ಡಿಯನ್ನು ವಾರ್ಷಿಕ ಶೇ.3ಕ್ಕೆ ಮಿತಿಗೊಳಿಸಿದೆ. ಬಡ್ಡಿ ಸಹಾಯಧನ ಯೋಜನೆಯನ್ನು ಪ್ರಕಟಿಸಿದೆ. ಅಲ್ಲದೆ, ರಾಜ್ಯ ಸರ್ಕಾರ ರಾಜ್ಯದಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸುವುದಕ್ಕಾಗಿ ಹೊಸ ಯೋಜನೆಯನ್ನು ಪ್ರಕಟಿಸಿದೆ. ಈ ಯೋಜನೆಯು ರಸಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯು ಮಣ್ಣಿನ ಫಲವತ್ತತೆಯನ್ನು ಕಡಿಮೆ ಮಾಡುವ ಸಮಸ್ಯೆಯನ್ನು ನೀಗಿಸುತ್ತದೆ ಹಾಗೂ ಅವುಗಳ ಬಳಕೆಯನ್ನು ಕಡಿಮೆ ಮಾಡುವುದರಿಂದ

ಕೃಷಿ ಉತ್ಪನ್ನವು ಹೆಚ್ಚು ಆರೋಗ್ಯಕರವನ್ನಾಗಿ ಮಾಡುವುದಲ್ಲದೆ, ರೈತರಿಗೆ ಹೆಚ್ಚಿನ ಲಾಭ ತಂದುಕೊಡುತ್ತದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ದೊರೆಯುವ ನಿಧಿಗಳಿಗೆ ರಾಜ್ಯದ ಸ್ವಂತ ಸಂಪನ್ಮೂಲಗಳನ್ನು ಕೂಡಿಸುವ ಮೂಲಕ ಸಣ್ಣ ನೀರಾವರಿಯನ್ನು ಉತ್ತೇಜಿಸುವುದಕ್ಕೆ, ಬೀಜ ಸಹಾಯಧನ ಒದಗಿಸುವುದಕ್ಕೆ ಹಾಗೂ ಸಮಗ್ರ ಜಲ ಸಂಪನ್ಮೂಲ ನಿರ್ವಹಣೆ ಕಾರ್ಯಕ್ರಮದ ಮುಖಾಂತರ ವಿವಿಧ ರೀತಿಯ ಮಣ್ಣು ಹಾಗೂ ನೀರನ್ನು ಸಂರಕ್ಷಿಸುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದಲ್ಲಿ ನೀರಾವರಿ ಪ್ರದೇಶಗಳನ್ನು ಹೆಚ್ಚಿಸುವುದಕ್ಕೆ ಗಣನೀಯವಾಗಿ ನಿಧಿ ಹಂಚಿಕೆ ಮಾಡಲಾಗುತ್ತಿದೆ ಹಾಗೂ 10 ಎಚ್‌ಪಿಗಿಂತ ಕಡಿಮೆಯಿರುವ ಐಪಿ ಸೆಟ್‌ಗಳನ್ನು ಬಳಸುತ್ತಿರುವ ರೈತರಿಗೆ ಉಚಿತ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುತ್ತಿದೆ.

## ಬಿ) <u>ಗ್ರಾಮೀಣಾಭಿವೃದ್ಧಿ</u>

43. ಸರ್ಕಾರದ ಕಾರ್ಯನೀತಿಯಲ್ಲಿ ಪ್ರಮುಖವಾಗಿ ಒತ್ತು ನೀಡುವ ಕ್ಷೇತ್ರಗಳ ಪೈಕಿ ಗ್ರಾಮೀಣಾಭಿವೃದ್ಧಿಯೂ ಒಂದು. ಪ್ರಸಕ್ತ ಸಾಲಿನಲ್ಲಿ ಕುಡಿಯುವ ನೀರು ಪೂರೈಕೆಗಾಗಿ ಹಂಚಿಕೆಗೆ ಮೊದಲ ಆದ್ಯತೆ ನೀಡಲಾಗಿದೆ. ಅಲ್ಲದೆ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ಯೋಜನಾ ಸ್ಕೀಂಗಳ ಅಡಿಯಲ್ಲಿ ಕಾರ್ಯಕ್ರಮಗಳನ್ನು ಕೈಗೊಂಡು ಎಲ್ಲಾ ಋತುಮಾನಗಳಿಗೆ ಹೊಂದಿಕೊಳ್ಳುವ ರಸ್ತೆಗಳನ್ನು ಒದಗಿಸುವ ಮೂಲಕ ಗ್ರಾಮಗಳ ಸಂಪರ್ಕದ ಕಡೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಈ ಸಾಲಿನ ಅವಧಿಯಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಹೊಸ ಉತ್ಸಾಹದಿಂದ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. 2008–09ರಲ್ಲಿ 358 ಕೋಟಿ ರೂಪಾಯಿಗಳ ವೆಚ್ಚದ ಬದಲಾಗಿ ಪ್ರಸಕ್ತ ಸಾಲಿನಲ್ಲಿ 2000 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಖರ್ಚಾಗುವ ನಿರೀಕ್ಷೆಯಿದೆ. ರಾಜ್ಯದಲ್ಲಿ 56 ಲಕ್ಷಗಳಿಗಿಂತ ಹೆಚ್ಚಿಗೆ ಉದ್ಯೋಗ ಕಾರ್ಡುಗಳನ್ನು ನೀಡಲಾಗಿದೆ. ಪ್ರವಾಹ ನಿಯಂತ್ರಣ, ಗ್ರಾಮೀಣ ಸಂಪರ್ಕ, ನೀರಿನ ಸೇವೆಗಳು ಹಾಗೂ ನೀರಿನ ಕೊಯ್ಲು,

ಸಾಂಪ್ರದಾಯಿಕ ಜಲಾಗಾರಗಳ ಪುನಶ್ಚೇತನ, ನೀರಾವರಿ ಸೌಲಭ್ಯಗಳ ಅಭಿವೃದ್ಧಿ ಹಾಗೂ ಭೂ ಅಭಿವೃದ್ಧಿಯಂತಹ ವಿಸ್ತರಣ ಕಾಮಗಾರಿಗಳನ್ನು ಈ ಯೋಜನೆ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ. ಮುಂದಿನ ವರ್ಷವೂ ಈ ಕಾರ್ಯಕ್ರಮವನ್ನು ಮುಂದುವರಿಸಲಾಗುತ್ತದೆ. ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ಸುವರ್ಣ ಗ್ರಾಮೋದಯ, ಸಂಪೂರ್ಣ ಸ್ವಚ್ಛತಾ ಆಂದೋಲನ, ಮುಖ್ಯಮಂತ್ರಿ ಗ್ರಾಮೀಣ ಯೋಜನೆಯಂತಹ ಇತರ ಕಾರ್ಯಕ್ರಮಗಳನ್ನು ಸಹ ಮಿಷನ್ ವಿಧಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

## ಸಿ) <u>ಆರೋಗ್ಯ ಮತ್ತು ಶಿಕ್ಷಣ</u>

44. ಆರೋಗ್ಯ ಮತ್ತು ಶಿಕ್ಷಣದ ಮೇಲಿನ ಸಮಗ್ರ ವೆಚ್ಚವು ವರ್ಷದಿಂದ ವರ್ಷಕ್ಕೆ ನಿರಂತರವಾಗಿ ಹೆಚ್ಚಾಗುತ್ತಲೇ ಇದೆ. ಮುಂದಿನ ವರ್ಷದಲ್ಲಿ ಆರೋಗ್ಯಕ್ಕೆ ಶೇಕಡಾ 21.73 ಮತ್ತು ಶಿಕ್ಷಣಕ್ಕೆ ಶೇಕಡಾ 20.31ರಷ್ಟು ಹೆಚ್ಚು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

45. ರಾಜ್ಯದಲ್ಲಿನ ಪ್ರತಿಯೊಂದು ಜನನವು ಆಸ್ಪತ್ರೆಗಳಲ್ಲಿಯೇ ಆಗುವಂತೆ ಸುನಿಶ್ಚಿತಪಡಿಸುವುದು ಸರ್ಕಾರದ ಪ್ರಯತ್ನವಾಗಿದೆ. ಈ ಸಂಬಂಧವಾಗಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ತಾಯಂದಿರಿಗೆ ಆರ್ಥಿಕವಾಗಿ ಸಹಾಯ ಮಾಡಲು ತಾಯಿ ಭಾಗ್ಯ, ಪ್ರಸೂತಿ ಆರೈಕೆಯಂತಹ ಹೊಸ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಅಲ್ಲದೆ, ಎಲ್ಲಾ ರೀತಿಯ ತುರ್ತು ಪರಿಸ್ಥಿತಿಗಳನ್ನು ನಿರ್ವಹಿಸಲು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24/7 ಯೋಜನೆಗಳನ್ನು ಪ್ರಾರಂಭಿಸಲಾಗಿದೆ.

46. ಪ್ರಾಥಮಿಕ ಶಾಲೆಗಳಿಗೆ ಮಕ್ಕಳ ದಾಖಲಾತಿಯಲ್ಲಿ ಸರ್ಕಾರ ಗಮನಾರ್ಹ ಯಶಸ್ಸನ್ನು ಸಾಧಿಸಿದೆ. ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಮಧ್ಯದಲ್ಲೇ ವಿದ್ಯಾಭ್ಯಾಸ ಬಿಡುವವರನ್ನು ತಡೆಯುವುದು ನಮ್ಮ ಮುಂದಿರುವ ಸವಾಲು. ಪ್ರೌಢಶಾಲೆ ಮಟ್ಟದಲ್ಲಿ ಶಾಲೆ ಬಿಡುವವರಿಗೆ

ತಿಳಿ ಹೇಳಲು ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನವನ್ನು ಆರಂಭಿಸಲಾಗಿದೆ. ಅಲ್ಲದೆ, ಸರ್ಕಾರ ವಿದ್ಯಾರ್ಥಿಗಳ ಉದ್ಯೋಗ ಕ್ಷಮತೆಯನ್ನು ಸುಧಾರಿಸಲು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ವಿಜ್ಞಾನ ಮತ್ತು ವಾಣಿಜ್ಯ ಶಿಕ್ಷಣವನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಸಂಪೂರ್ಣ ಜನತೆಯನ್ನು ಒಳಗೊಳ್ಳುವುದು ಮಾತ್ರವಲ್ಲದೆ ನೀಡಲಾದ ಶಿಕ್ಷಣದ ಗುಣಮಟ್ಟವು ಉದ್ಯೋಗ ಕ್ಷಮತೆ ಹಾಗೂ ಜೀವನ ಕಲಿಕಾ ಕೌಶಲ್ಯಗಳು ನಿರ್ಧಾರಕ ಮಾನದಂಡಗಳೆಂಬುದನ್ನು ಸರ್ಕಾರ ಮನಗಂಡಿದೆ.

## ಡಿ) <u>ವಿದ್ಯುತ್</u>

47. ಕರ್ನಾಟಕವು ಇಂದು ವಿದ್ಯುತ್ ಕೊರತೆ ಎದುರಿಸುತ್ತಿರುವ ರಾಜ್ಯವಾಗಿದೆ. ಬೇಸಿಗೆ ಕಾಲದಲ್ಲಿ ಒತ್ತಡದ ಅವಧಿಗಳಲ್ಲಿ 1,000 ಮೆಗಾವ್ಯಾಟ್‌ನಿಂದ 1,500 ಮೆಗಾವ್ಯಾಟ್ ಕೊರತೆಯನ್ನು ಸರಿದೂಗಿಸಲು ಉತ್ಪಾದನೆ ಹಾಗೂ ಪ್ರಸರಣಗಳೆರಡರಲ್ಲಿಯೂ ಗಣನೀಯ ಹೂಡಿಕೆಗಳ ಅಗತ್ಯವಿದೆ. ರಾಜ್ಯದಲ್ಲಿನ ಪ್ರಸರಣ ನಷ್ಟವು ದೇಶದಲ್ಲಿಯೇ ಕಡಿಮೆಯಾಗಿದ್ದರೂ ಸಹ ಈಗ ಆಗುತ್ತಿರುವ ಶೇ.22ರ ನಷ್ಟವನ್ನು ಮುಂದಿನ ಮೂರು ವರ್ಷಗಳಲ್ಲಿ ಶೇ.18ರ ಮಟ್ಟಕ್ಕೆ ಇಳಿಸುವುದಕ್ಕೆ ಅವಕಾಶಗಳಿವೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಅನೇಕ ಪ್ರೋತ್ಸಾಹಕಗಳನ್ನು ನೀಡಿದೆ. ಪ್ರಗತಿಯಲ್ಲಿರುವ ಸುಮಾರು ಒಟ್ಟು 8,000 ಮೆಗಾವ್ಯಾಟ್ ಯೋಜನೆಗಳು ಮುಂದಿನ ಐದು ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. 2008–09ನೇ ಸಾಲಿನಲ್ಲಿ ಸರ್ಕಾರ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ 500 ಕೋಟಿ ರೂಪಾಯಿಗಳ ಈಕ್ವಿಟಿ ವಂತಿಗೆಯನ್ನು ನೀಡಿದೆ. ಎಲ್ಲರಿಗೂ ವಿದ್ಯುತ್ ಒದಗಿಸುವ ತನ್ನ ಗುರಿಗೆ ಸಂಬಂಧಿಸಿದಂತೆ ಸರ್ಕಾರವು, ರಾಜ್ಯದ ಉತ್ಪಾದನೆ, ಪ್ರಸರಣ ಮತ್ತು ವಿತರಣಾ ಜಾಲವನ್ನೂ ಬಲಪಡಿಸುವುದಕ್ಕಾಗಿ ಪ್ರಸಕ್ತ ವರ್ಷದಲ್ಲಿ ಇಂಧನ ವಲಯದಲ್ಲಿ ಮತ್ತೆ 500 ಕೋಟಿ ರೂ.ಗಳ ಈಕ್ವಿಟಿಯನ್ನು ಹೂಡಲು ನಿರ್ಧರಿಸಿರುತ್ತವೆ. ಎಲ್ಲಾ ವಿದ್ಯುತ್ ಕೊರತೆಯನ್ನು ನಿರ್ವಹಿಸುವುದಕ್ಕೆ ರಾಜ್ಯ ಸರ್ಕಾರದ

ಹಣಕಾಸು ಸಂಪನ್ಮೂಲಗಳಿಂದಲೇ ಸಾಧ್ಯವಿಲ್ಲದಿರುವುದರಿಂದಾಗಿ ಹಲವಾರು ಯೋಜನೆಗಳನ್ನು ಸಾರ್ವಜನಿಕ– ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ.

ಇ) <u>ನಗರಾಭಿವೃದ್ಧಿ ಇಲಾಖೆ</u>

48. ಕರ್ನಾಟಕವು 1.76ಕೋಟಿ ನಗರ ಜನಸಂಖ್ಯೆ (2001ರ ಜನಗಣತಿಗನುಸಾರ) ಹೊಂದಿದ್ದು, ಭಾರತದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯಗಳ ಪೈಕಿ ನಾಲ್ಕನೇ ಸ್ಥಾನದಲ್ಲಿದೆ. ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳಿಗನುಸಾರ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡುವ ವಿನಿಯೋಗವು 2007–08ರಲ್ಲಿನ 1,926 ಕೋಟಿ ರೂ.ಗಳಿಂದ 2009–10ನೇ ಸಾಲಿಗೆ 2,370 ಕೋಟಿ ರೂ.ಗಳಿಗೆ ಸತತವಾಗಿ ಹೆಚ್ಚಾಗಿರುತ್ತದೆ.

49. ಕಳೆದ ವರ್ಷಾವಧಿಯಲ್ಲಿ ಸರ್ಕಾರ, 7 ನಗರ ಪಾಲಿಕೆಗಳಲ್ಲಿ ಪ್ರತಿಯೊಂದಕ್ಕೂ 100 ಕೋಟಿ ರೂ.ಗಳನ್ನು ಒದಗಿಸುವ ವಿಶೇಷ ನಗರಾಭಿವೃದ್ಧಿ ಪ್ಯಾಕೇಜನ್ನೂ ಪ್ರಾರಂಭಿಸಿದೆ. ಒಳಚರಂಡಿ, ನೀರು ಪೂರೈಕೆ ಮತ್ತು ರಸ್ತೆಗಳಿಗೆ ಸಂಬಂಧಿಸಿದ ವ್ಯಾಪಕವಾದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅಲ್ಲದೆ ಪ್ರಸಕ್ತ ವರ್ಷದಲ್ಲಿ ಹಂತ II ಮತ್ತು ಹಂತ IIIರ ನಗರಗಳ ಮೂಲಸೌಕರ್ಯ ಮತ್ತು ನಗರ ಆಡಳಿತ ನಿರ್ವಹಣೆಯನ್ನು ಸುಧಾರಿಸುವುದಕ್ಕಾಗಿ ಪುರಸಭೆಗಳು ಮತ್ತು ಪಟ್ಟಣ ಪುರಸಭೆಗಳಂಥ ಅತಿ ಸಣ್ಣ ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಗಳನ್ನು ಒದಗಿಸುವುದಕ್ಕಾಗಿ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪ್ರಮಾಣದ ನಗರಾಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದ ಒಟ್ಟು ಅಂದಾಜುವೆಚ್ಚವು 1,400 ಕೋಟಿ ರೂ.ಗಳಷ್ಟಿದ್ದು ಇದು ಎರಡು ವರ್ಷದ ಅವಧಿಯೊಳಗೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಇದರೊಂದಿಗೆ ಬೆಂಗಳೂರು ಮತ್ತು ಮೈಸೂರು ನಗರಗಳನ್ನು ಕೇಂದ್ರ ಸರ್ಕಾರದ ಜವಹರ್‌ಲಾಲ್ ನೆಹರು ರಾಷ್ಟ್ರೀಯ

ನಗರ ನವೀಕರಣ ಮಿಷನ್ ಅಡಿಯಲ್ಲಿ ಸೇರಿಸಿಕೊಳ್ಳಲಾಗಿದೆ. ಈ ನಗರಗಳಲ್ಲಿ ಕೈಗೊಳ್ಳುವ ಯೋಜನೆಗಳಲ್ಲಿ, ನಗರದ ಬಡವರಿಗಾಗಿ ಮೂಲಸೌಕರ್ಯಗಳನ್ನು ಒದಗಿಸುವುದು, ನಗರ ಸಾರಿಗೆ ಮತ್ತು ನಗರ ಮೂಲ ಸೌಕರ್ಯ ಹಾಗೂ ಆಡಳಿತ ನಿರ್ವಹಣೆಗಳು ಒಳಗೊಂಡಿರುತ್ತದೆ. ಮಿಷನ್‌ನ ಅಡಿಯಲ್ಲಿ 4,000 ಕೋಟಿ ರೂ.ಗಳ ಹಂಚಿಕೆಯನ್ನು ಮಾಡಲಾಗಿರುತ್ತದೆ ಮತ್ತು 2011–12ರ ವರೆಗೆ ಹಣಕಾಸು ನೆರವು ನೀಡುವುದಕ್ಕೆ ವ್ಯವಸ್ಥೆ ಮಾಡಲಾಗಿರುತ್ತದೆ.

50. ರಾಜ್ಯದಲ್ಲಿ ಪ್ರಸ್ತುತ, ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಹೂಡಿಕೆ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ವಿಶ್ವಬ್ಯಾಂಕ್ ನೆರವಿನ ಪುರಸಭಾ ಸುಧಾರಣಾ ಯೋಜನೆ (ಕೆಎಂಆರ್‌ಪಿ) ಮತ್ತು ಕರ್ನಾಟಕ ನಗರ ನೀರು ಪೂರೈಕೆ ಮತ್ತು ನೈರ್ಮಲ್ಯ ಸುಧಾರಣಾ ಯೋಜನೆ (ಕೆಯುಡಬ್ಲ್ಯೂಎಸ್‌ಪಿ) ಗಳೂ ಸೇರಿದಂತೆ ಐದು ಪ್ರಮುಖ ಬಾಹ್ಯ ನೆರವಿನ ಯೋಜನೆಗಳು ಪ್ರಗತಿಯಲ್ಲಿರುತ್ತವೆ. ಇದರೊಂದಿಗೆ, ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ಹೆಚ್ಚುವರಿ 500ಎಂಎಲ್‌ಡಿ (ಪ್ರತಿ ದಿನಕ್ಕೆ ಹೆಚ್ಚುವರಿ 500 ದಶಲಕ್ಷ ಲೀಟರ್) ನೀರನ್ನು ತರುವುದಕ್ಕೆ ಸಂಬಂಧಿಸಿದ ಜೆಬಿಐಸಿ ನೆರವಿನ ಕಾವೇರಿ ನೀರು ಸರಬರಾಜು ಯೋಜನೆ, ಹಂತ– II ಪ್ರಗತಿಯಲ್ಲಿರುತ್ತದೆ. ಇದರೊಂದಿಗೆ ಜೆಐಸಿಎ ನೆರವಿನ ಬೆಂಗಳೂರು ಮೆಟ್ರೋ ಯೋಜನೆಯ ಮೊದಲನೇ ಮಾರ್ಗವು ಡಿಸೆಂಬರ್ 2010ಕ್ಕೆ ಕಾರ್ಯಾರಂಭವಾಗುವುದೆಂದು ನಿರೀಕ್ಷಿಸಲಾಗಿದೆ ಮತ್ತು ಇಡೀ ಯೋಜನೆ ಮಾರ್ಚ್ 2013ರಲ್ಲಿ ಕಾರ್ಯಾರಂಭಿಸುವುದೆಂದು ನಿರೀಕ್ಷಿಸಲಾಗಿದೆ.

## ಎಫ್) ಬದ್ಧ ವೆಚ್ಚಗಳು

51. ಸಂಬಳಗಳು, ನಿವೃತ್ತಿ ವೇತನಗಳು, ಬಡ್ಡಿ ಸಂದಾಯಗಳು, ಸಹಾಯಧನಗಳು, ಅನುದಾನಗಳು, ಆಸ್ತಿಗಳ ನಿರ್ವಹಣೆ ಮತ್ತು ಸಾಮಾಜಿಕ ಭದ್ರತಾ ಪಿಂಚಣಿಗಳು ಸರ್ಕಾರದ ಬದ್ಧತಾ ವೆಚ್ಚದ ಪ್ರಮುಖ ಭಾಗವಾಗಿದೆ. ಮುಂದಿನ ನಕ್ಷೆಯಲ್ಲಿ ತೋರಿಸಿರುವಂತೆ, ಇಂಥ ಬದ್ಧತಾ ವೆಚ್ಚಗಳು, 2009–10ರಲ್ಲಿನ ಕೇಂದ್ರ ಸರ್ಕಾರದಿಂದ ದೊರೆತ ತೆರಿಗೆ ವಿನಿಯೋಗವೂ (ಹಂಚಿಕೆಯಾಗಿ) ಒಳಗೊಂಡಂತೆ ತೆರಿಗೆ ಮತ್ತು ತೆರಿಗೇಯೇತರ ಆದಾಯಗಳ ಶೇ 70ರಷ್ಟನ್ನು ಒಳಗೊಂಡಿರುತ್ತದೆ. ಇದರಿಂದಾಗಿ ಮುಖ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉಳಿದ ಶೇಕಡಾ 30 ತೆರಿಗೆ ಮತ್ತು ತೆರಿಗೆಯೇತರ ಆದಾಯ, ಕೇಂದ್ರ ಸರ್ಕಾರದ ಅನುದಾನಗಳು ಮತ್ತು ಸಾಲಗಳಿಂದ ಭರಿಸಬೇಕಾಗುತ್ತದೆ. ಆದಾಗ್ಯೂ ಶಿಕ್ಷಕರು ಹಾಗೂ ವೈದ್ಯರುಗಳ ವೇತನ ಮತ್ತು ಸಾಮಾಜಿಕ ಭದ್ರತಾ ಪಿಂಚಣಿಗಳು ಬದ್ಧತಾ ವೆಚ್ಚದ ಪ್ರಮುಖ ಭಾಗವಾಗಿದ್ದು ಬೆಳವಣಿಗೆಯನ್ನು ಸುಲಭಗೊಳಿಸಿ ದುರ್ಬಲ ವರ್ಗಕ್ಕೆ ರಕ್ಷಣೆಯನ್ನು ಒದಗಿಸುತ್ತದೆ.

**ಬಧ್ದ ವೆಚ್ಚ ಹಾಗೂ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ ಹೋಲಿಕೆ**



52. ಬದ್ಧತಾ ವೆಚ್ಚದ ನಿಖರವಾದ ಹೆಚ್ಚುವರಿಯನ್ನು ಸಾಕಷ್ಟು ನಿಯಂತ್ರಿಸಲಾಗಿದೆ. ಆದರೆ ಆರ್ಥಿಕ ಹಿಂಜರಿತದ ಪರಿಣಾಮವಾಗಿ ತೆರಿಗೆ ಮತ್ತು ತೆರಿಗೆಯೇತರ ಆದಾಯವು ಗಣನೀಯವಾಗಿ ಕಡಿಮೆಯಾಗಿದೆ. ಬದ್ಧತಾ ವೆಚ್ಚದಲ್ಲಿನ ಹೆಚ್ಚಳವು ತೆರಿಗೆ ಮತ್ತು ತೆರಿಗೆಯೇತರ ರಾಜಸ್ವಗಳ ಹೆಚ್ಚಳಕ್ಕೆ ಹೋಲಿಸಿದಾಗ ಆದ್ಯತಾ ಕಾರ್ಯಕ್ರಮಗಳಿಗೆ ಅದರಲ್ಲೂ ಮುಖ್ಯವಾಗಿ ಬಂಡವಾಳ ಹೂಡಿಕಾ ಯೋಜನೆಗಳಿಗೆ ಹಣತೊಡಗಿಸಲು ಕಷ್ಟವಾಗಿರುತ್ತದೆ. ಮುಂದಿನ ವರ್ಷಗಳಲ್ಲಿ ಮೂಲ ಸೌಕರ್ಯ ವಲಯಕ್ಕೆ ಸಾಕಷ್ಟು ಹಣ ಒದಗಿಸಲು ಕೆಲವೊಂದು ಬದಲಾವಣೆಗಳನ್ನು ತರಬೇಕಾಗುತ್ತದೆ.

53. ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಟ್ಟದಲ್ಲಿ ವಿತ್ತೀಯ ಸುಧಾರಣೆ ಅವಶ್ಯವಿರುವ ಕಾರಣ ವೆಚ್ಚದ ಗುಣಮಟ್ಟಕ್ಕೆ ಗಮನಾರ್ಹ ಬೆಂಬಲ ದೊರೆತಿದೆ. ವಿತ್ತೀಯ ಒತ್ತಡದ ಸಂದರ್ಭಗಳಲ್ಲಿ, ಸರಿಪಡಿಸುವಿಕೆಯನ್ನು ವೆಚ್ಚದ ಪರಿಮಾಣ ಅಥವಾ ಸಾಮರ್ಥ್ಯವನ್ನು ಬಲಿಕೊಡದಂತೆ ನೋಡಿಕೊಳ್ಳಬೇಕಾದ ಅಗತ್ಯವಿದೆ. 13ನೇ ಹಣಕಾಸು ಆಯೋಗವು ಈ ಅಂಶಗಳ ಬಗ್ಗೆ ಸಹ ಪರಿಶೀಲಿಸಿದೆ ಮತ್ತು ಉತ್ತಮ ಹುಟ್ಟುವಳಿಗಳು ಮತ್ತು ಫಲಿತಾಂಶಗಳನ್ನು ಪಡೆಯಲು ಸಾರ್ವಜನಿಕ ವೆಚ್ಚದ ಗುಣಮಟ್ಟದ ಸುಧಾರಣೆಯ ಅಗತ್ಯದ ಬಗ್ಗೆ ಶಿಫಾರಸ್ಸು ಮಾಡಿದೆ.

# ಅಧ್ಯಾಯ – 6

## ಸಾರ್ವಜನಿಕ ಹಣಕಾಸು ನಿರ್ವಹಣೆ ಮತ್ತು ವ್ಯವಸ್ಥಿತ ಸುಧಾರಣೆಗಳು

54. ವೆಚ್ಚದ ಗುಣಮಟ್ಟ ಮತ್ತು ಅದರ ವೇಗಗತಿಯನ್ನು ಸುಧಾರಣೆ ಮಾಡುವ ಕಾರ್ಯ ಸರ್ಕಾರದ ಮುಂದಿರುವ ಒಂದು ನಿರಂತರ ಸವಾಲು. ಈ ಉದ್ದೇಶ ಸಾಧನೆಗೆ, ಸರ್ಕಾರವು, ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಎಲ್ಲ ಯೋಜನೆಗಳಿಗಾಗಿ ಡಿಸೆಂಬರ್, 2008 ರಿಂದ ಜಾರಿಗೆ ಬರುವಂತೆ ಮಾಸಿಕ ಕಾರ್ಯಯೋಜನಾ ಅನುಷ್ಠಾನ ಕ್ಯಾಲೆಂಡರ್ (ಎಂಪಿಐಸಿ)ನ್ನು ಆರಂಭಿಸಿದೆ. ಈ ಉಪಕ್ರಮದ ಉದ್ದೇಶವು ಪರಿಣಾಮಕಾರಿ ಅನುಷ್ಠಾನ ಮತ್ತು ಸೇವಾ ನೀಡಿಕೆಯಲ್ಲಿ ದಕ್ಷತೆ ಮತ್ತು ಕಂದಾಯಗಳು ಮತ್ತು ವೆಚ್ಚದ ಪರಿಚಲನೆಯಲ್ಲಿ ಅಸಮತೆಯನ್ನು ಕಡಿಮೆಗೊಳಿಸುವ ಮೂಲಕ ವೆಚ್ಚದ ಸಾಮರ್ಥ್ಯವನ್ನು ಸುಧಾರಣೆ ಮಾಡುವ ಬಗೆಗೆ ಕೇಂದ್ರೀಕೃತವಾಗಿದೆ.

### ವೆಚ್ಚ ಸುಧಾರಣೆಗಳ ಆಯೋಗ:

55. ವೆಚ್ಚದ ವ್ಯವಸ್ಥೆಗಳನ್ನು ಸುಧಾರಣೆ ಮಾಡುವ ಹಿನ್ನೆಲೆಯಲ್ಲಿ, ಸರ್ಕಾರವು ಕಳೆದ ವರ್ಷ ವೆಚ್ಚ ಸುಧಾರಣೆ ಆಯೋಗವನ್ನು ಸ್ಥಾಪಿಸಿದೆ. ಆಯೋಗದಲ್ಲಿ ಕಾರ್ಯಾಂಗ, ಕೈಗಾರಿಕೆ ಮತ್ತು ಶೈಕ್ಷಣಿಕ ಕ್ಷೇತ್ರದವರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಆಯೋಗವು ಆಯ್ದ ಇಲಾಖೆಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಮುಖ ವಿಷಯಗಳ ಬಗ್ಗೆ ಶಿಫಾರಸು ಮಾಡಿ ಫೆಬ್ರವರಿ, 2010 ರಲ್ಲಿ ತನ್ನ ಮೊದಲನೇ ವರದಿಯನ್ನು ಸಲ್ಲಿಸಿದೆ. ಕೆಲವು ಸಾಮಾನ್ಯ ಶಿಫಾರಸುಗಳು ಈ ಮುಂದಿನಂತಿವೆ:–

(ಎ) ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸುವ ಅಗತ್ಯವಿದೆ ಮತ್ತು ವಿವೇಚನಾ ಪೂರ್ಣ ಹಂಚಿಕೆಗಳ ಮೂಲಕ ವಿತ್ತೀಯ ಅನಿಶ್ಚಿತತೆಗಳಿಂದ ಅದನ್ನು ಸಂರಕ್ಷಿಸಬೇಕು. ಬಂಡವಾಳ ವೆಚ್ಚವನ್ನು (ಸಾಲ ಮರುಸಂದಾಯವನ್ನು ಹೊರತುಪಡಿಸಿ) ಪ್ರತಿ ವರ್ಷ ರಾಜ್ಯ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 5 ರಷ್ಟಕ್ಕೆ ನಿರ್ವಹಿಸಬೇಕು.

(ಬಿ) 2010–11ನೇ ಸಾಲಿನಿಂದ ಪ್ರಾರಂಭಿಸಿ ಹಣಕಾಸು ಸಚಿವರು ಆರು ತಿಂಗಳಿಗೆ ಒಮ್ಮೆ ಸದನದಲ್ಲಿ 50 ಕೋಟಿ ರೂಪಾಯಿಗಳು ಮತ್ತು ಅದಕ್ಕೂ ಹೆಚ್ಚಿನ ಅಂದಾಜು ವೆಚ್ಚವುಳ್ಳ ಪ್ರತಿಯೊಂದು ಯೋಜನೆಯ ಪ್ರಗತಿಯನ್ನು ವಿವರಿಸಿ ಹೇಳಿಕೆಯನ್ನು ನೀಡಬೇಕು.

(ಸಿ) ಹೂಡಿಕೆ/ ಯೋಜನಾ ಅಂದಾಜಿಗಾಗಿ ಹಿಂದಿನ ವೆಚ್ಚ ಪೂರ್ವ ನಿರ್ವಹಣಾ ಸಾಧನ ವಿಷಯ ತಿಳಿದು ವೆಚ್ಚಗಳ ಬಗ್ಗೆ ನಿರ್ಧಾರ ಕೈಗೊಳ್ಳಲು ವೆಚ್ಚದ ಪ್ರಸ್ತಾವನೆಗಳನ್ನು ಸಿದ್ಧಪಡಿಸಲು ಮತ್ತು ಪರಿಶೀಲಿಸಲು ಮತ್ತು ಅನುಷ್ಠಾನದಲ್ಲಿ ಆರ್ಥಿಕ ಶಿಸ್ತನ್ನು ಉಂಟುಮಾಡಲು ಅವನ್ನು ಸಾಂಸ್ಥಿಕಗೊಳಿಸಬೇಕು. ಸರ್ಕಾರವು, ಕೇಂದ್ರ ಸರ್ಕಾರದಲ್ಲಿ ಪ್ರಸಕ್ತ ಜಾರಿಯಲ್ಲಿರುವ ಪದ್ಧತಿಗಳನ್ನು ಆಧರಿಸಿ ವೆಚ್ಚ ಹಣಕಾಸು ಸಮಿತಿ (ಇಎಫ್‌ಸಿ) ಯೊಂದನ್ನು ಸ್ಥಾಪಿಸಬಹುದು.

(ಡಿ) ಆರೋಗ್ಯ ಮತ್ತು ಶಿಕ್ಷಣದಂತಹ ವಲಯಗಳ ಅಭಿವೃದ್ಧಿಯಲ್ಲಿ ಗಮನಿಸಲಾದ ಪ್ರಾದೇಶಿಕ ಅಸಮಾನತೆಗಳನ್ನು ನಿವಾರಿಸಲು ಕೇವಲ ಹಂಚಿಕೆಗಳನ್ನು ಹೆಚ್ಚಿಸುವುದಷ್ಟಕ್ಕೆ ಸೀಮಿತವಾಗಿರದೆ ಪ್ರತಿ ವಲಯದಲ್ಲೂ ಹಿಂದುಳಿದ, ಅತಿ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ಎಂದು ಗುರುತಿಸಲಾದ ತಾಲೂಕುಗಳಿಗಾಗಿ ನಿರ್ದಿಷ್ಟ ಕಾಲಮಿತಿಯನ್ನು ವಿಧಿಸಿ ನಿರೀಕ್ಷಿತ ಫಲಿತಾಂಶಗಳನ್ನು, ಪೂರ್ವ ನಿರ್ಧಾರಿತ ಗುರಿಗಳನ್ನು ಹಾಗೂ ಸಾಧನೆಯ ಮಟ್ಟಗಳನ್ನು ನಿಗದಿಪಡಿಸಬೇಕು.

(ಇ) ಎಚ್‌ಡಿಐ ಮೇಲೆ ಪರಿಣಾಮ ಬೀರುವ ಕಾರ್ಯಕ್ರಮಗಳಿಗೆ ಹೂಡಿಕೆಯನ್ನು ಆದ್ಯತೆಯ ಮೇಲೆ ನೀಡಬೇಕು. ಅದಕ್ಕಾಗಿ ಸಾಕಷ್ಟು ನಿಧಿ ಕಾಯ್ದಿರಿಸಬೇಕು ಮತ್ತು ಪ್ರತಿಯೊಂದು ಯೋಜನೆಯ ಧ್ಯೇಯೋದ್ದೇಶಕ್ಕೆ ಸಂಬಂಧಿಸಿದಂತೆ ವೆಚ್ಚದ ಕಾರ್ಯಕ್ಷಮತೆಗೆ ಒತ್ತನ್ನು ನೀಡಬೇಕು.

(ಎಫ್) ಪ್ರತಿಯೊಂದು ಇಲಾಖೆಯು ತನ್ನ ಕಾರ್ಯಾಚರಣೆಗೆ ಅಳೆಯಬಹುದಾದ ಮಾನಕಗಳಲ್ಲಿ ಮುಖ್ಯ ಗುರಿಗಳನ್ನು ಪ್ರಕಟಿಸಬೇಕು ಮತ್ತು ಗುರಿಯ ಪ್ರತಿಯಾಗಿ ಎಷ್ಟು ಸಾಧನೆ ಮಾಡಿದೆ ಎಂಬುದನ್ನು ಅಳೆಯಲು ಸಾಧ್ಯವಾಗುವಂತೆ ಪ್ರಕಟಪಡಿಸಬೇಕು.

(ಜಿ) ಎಲ್ಲ ಯೋಜನೆಗಳು/ ಕಾರ್ಯಕ್ರಮಗಳು/ ಕಾರ್ಯಯೋಜನೆಗಳು ಸಾಧಿಸಬೇಕಾದ ಉದ್ದೇಶಗಳು/ ಗುರಿಗಳನ್ನು ಸೂಚಿಸುವ ಮತ್ತು ಅಂಥ ಯೋಜನೆಗಳು/ ಕಾರ್ಯಕ್ರಮಗಳು/ ಕಾರ್ಯಯೋಜನೆಗಳನ್ನು ಮುಕ್ತಾಯಗೊಳಿಸಬೇಕಾದಂಥ ಅಂತಿಮ ವರ್ಷವನ್ನು ನಿರ್ದಿಷ್ಟಪಡಿಸಿ ನಿರ್ದಿಷ್ಟ ಅವಧಿಯಲ್ಲಿ ಮುಕ್ತಾಯಗೊಳ್ಳುವ ಷರತ್ತು ಒಳಗೊಂಡಿರಬೇಕು.

(ಎಚ್) ಎಲ್ಲ ಇಲಾಖೆಗಳಲ್ಲಿ ರೂ. 100 ಲಕ್ಷಕ್ಕಿಂತ ಕಡಿಮೆ ಆಯವ್ಯಯ ಇರುವ ಯೋಜನಾ ಹಂಚಿಕೆಗಳನ್ನು ರದ್ದುಪಡಿಸಬೇಕು. 100 ಮತ್ತು 500 ಲಕ್ಷ ರೂಪಾಯಿಗಳ ನಡುವಿನ ಆಯವ್ಯಯ ಹಂಚಿಕೆ ಇರುವ ಯೋಜನೆಗಳನ್ನೂ ಅವುಗಳ ದಕ್ಷತೆಗೆ ಸಂಬಂಧಿಸಿದಂತೆ ಪರಿಶೀಲಿಸಿ ನೋಡಬೇಕು. ಯೋಜನೆಗಳು ಉಪಯುಕ್ತವೆಂದು ಕಂಡುಬಂದರೆ, ಇಂತಹದೇ ಉದ್ದೇಶಗಳನ್ನು ಹೊಂದಿರುವ ಯಾವುದೇ ಜಾರಿಯಲ್ಲಿರುವ ಯೋಜನೆಯೊಂದಿಗೆ ಸೇರಿಸುವುದನ್ನು ಪರಿಗಣಿಸಬಹುದು.

(ಐ) ಆರ್ಥಿಕ ಪರಿಸ್ಥಿತಿ ಅಥವಾ ಕ್ರಮಬದ್ಧ ಆಡಳಿತದಲ್ಲಿನ ಬದಲಾವಣೆಗಳ ಕಾರಣದಿಂದ ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡ ಇಲಾಖೆಗಳು/ ಕಚೇರಿಗಳನ್ನು ಇದೇ ರೀತಿ ಅಥವಾ ಪೂರಕ ಉದ್ದೇಶಗಳನ್ನು ಹೊಂದಿರುವ ಇತರ ಇಲಾಖೆಗಳು/ ಕಚೇರಿಗಳಲ್ಲಿ, ಈ ಸಂಸ್ಥೆಗಳಲ್ಲಿನ ಸಿಬ್ಬಂದಿಗಳ ಬಳಕೆ, ನಿಯೋಜನೆ ಮತ್ತು ಅವರ ಸೇವೆಗಳನ್ನು ಸೂಕ್ತವಾಗಿ ಬಳಸಿಕೊಳ್ಳುವಂತೆ ಮಾಡಲು ವಿಲೀನಗೊಳಿಸಬೇಕು.

(ಜೆ) ಎಲ್ಲ ತಾಂತ್ರಿಕೇತರ 'ಸಿ' ಸಮೂಹ ಮತ್ತು 'ಡಿ' ಸಮೂಹದ ಹುದ್ದೆಗಳು 2 ವರ್ಷಗಳಿಗಿಂತ ಹೆಚ್ಚಾಗಿ ಖಾಲಿ ಇದ್ದರೆ ಅವುಗಳನ್ನು ರದ್ದುಪಡಿಸಬೇಕು ಮತ್ತು ಅಗತ್ಯತೆಯು ಕಂಡುಬಂದರೆ ಆ ಹುದ್ದೆಗಳನ್ನು ಪುನಃ ಸೃಜಿಸಬೇಕು.

56. ಆಯೋಗವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಉದ್ಯೋಗ ಮತ್ತು ತರಬೇತಿ, ಸಮಾಜಕಲ್ಯಾಣ, ಲೋಕೋಪಯೋಗಿ ಮತ್ತು ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳಿಗಾಗಿ ನಿರ್ದಿಷ್ಟ ಶಿಫಾರಸುಗಳನ್ನು ಸಹ ಮಾಡಿದೆ. ಈ ಶಿಫಾರಸ್ಸುಗಳು ಪ್ರಸ್ತುತ ಸರ್ಕಾರದ ಸಕ್ರಿಯ ಪರಿಶೀಲನೆಯಲ್ಲಿವೆ.

## <u>ಖಜಾನೆ – II</u>

57. ಖಜಾನೆಯಲ್ಲಿನ ಪ್ರಮುಖ ಕಾರ್ಯಾಚರಣೆಗಳನ್ನು ಗಣಕೀಕರಣಗೊಳಿಸುವ ಕಾರ್ಯವನ್ನು 2001ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಯಿತು. ಹೀಗೆ ಅನುಷ್ಠಾನಗೊಳಿಸಿದಾಗ ಈ ಖಜಾನೆ ಪದ್ಧತಿ ಈ ಹಿಂದೆ ನಿರ್ವಹಿಸುತ್ತಿದ್ದಂತಹ ಪದ್ಧತಿಗಿಂತ ಅತ್ಯಂತ ಸುಧಾರಿತ ವ್ಯವಸ್ಥೆಯಾಗಿತ್ತು. ಏಕೆಂದರೆ ಇದರಲ್ಲಿ ಗಣಕ ಯಂತ್ರದ ಮೂಲಕ ಎಲ್ಲಾ ಖಜಾನೆಗಳಲ್ಲಿ ಬಿಲ್ಲುಗಳನ್ನು ಅನುಮೋದಿಸಲಾಗುತ್ತದೆ. ಆಯಾ ತಿಂಗಳೇ ಲೆಕ್ಕಪತ್ರಗಳನ್ನು ಸಿದ್ಧಪಡಿಸಲು

ಅನುಕೂಲವಾಗುತ್ತದೆ. ಹಾಗೂ ಎಲ್ಲಕ್ಕೂ ಮಿಗಿಲಾಗಿ ಅಧಿಕ ಹಣ ಸೆಳೆಯುವುದು, ಮೋಸದಿಂದ ಹಣ ತೆಗೆಯುವುದು, ಖರ್ಚುಗಳನ್ನು ತಪ್ಪಾಗಿ ವರ್ಗೀಕರಿಸುವುದು ಮತ್ತು ಲೆಕ್ಕಗಳ ಸಮನ್ವಯೀಕರಣ ಮಾಡದಿರುವುದು ಮುಂತಾದ ಕೈನಿಂದ ಕೆಲಸ ಮಾಡುವಾಗ ಇರುತ್ತಿದ್ದ ನ್ಯೂನ್ಯತೆಯನ್ನು ತಪ್ಪಿಸುತ್ತಿದೆ. ಇದು ನಗದು ನಿರ್ವಹಣೆ ಮತ್ತು ಆಯವ್ಯಯ ನಿರ್ವಹಣೆಗೆ ಆಡಳಿತ ವರ್ಗಕ್ಕೆ ಗಣನೀಯವಾಗಿ ಸಹಾಯ ಮಾಡಿದೆ.

58. 2001ರಲ್ಲಿ ಖಜಾನೆ ಯೋಜನೆಯನ್ನು ಜಾರಿಗೊಳಿಸಲಾದಂದಿನಿಂದ ವ್ಯಾಪಕ ಸಮಗ್ರ ಹಣಕಾಸು ನಿರ್ವಹಣೆಯ ವ್ಯವಸ್ಥೆಯಲ್ಲಿ ಸರ್ಕಾರದ ಕಾರ್ಯಕಾರಿ ಅಗತ್ಯಗಳು ಗಣನೀಯವಾಗಿ ಹೆಚ್ಚಿದೆ. ಗಣಕ ವ್ಯವಸ್ಥೆಯ ಬಹುಭಾಗ ತಾಂತ್ರಿಕವಾಗಿ ತೀರಾ ಹಳೆಯದಾಗಿದೆ. ಆದಕಾರಣ ಸರ್ಕಾರವು ಖಜಾನೆ–2 ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನಿರ್ಧರಿಸಿದೆ. ಇದರಲ್ಲಿ ಹಿತಾಸಕ್ತಿದಾರ ಇಲಾಖೆ ಮತ್ತು ಖಜಾನೆ ತಕ್ಷಣ ಸಂಪರ್ಕ ಸಾಧಿಸಬಹುದಾಗಿದೆ. ಖಜಾನೆ–2 ಕಾರ್ಯಕ್ರಮದಲ್ಲಿ ಇರಿಸಿಕೊಂಡಿರುವ ಧ್ಯೇಯಗಳಲ್ಲಿ ನಿಧಿಗಳ ಬಿಡುಗಡೆ ಮತ್ತು ಬಿಲ್ಲುಗಳ ಮಂಡನೆಗಾಗಿ ಆನ್ ಲೈನ್ ವ್ಯವಸ್ಥೆ ಅಳವಡಿಸುವುದು, ಶೇ. 90ರಷ್ಟು ಹಣ ಸಂದಾಯಗಳಿಗೆ ಇ.ಸಿ.ಎಸ್ ಹಣ ಸಂದಾಯ ತಂತ್ರಜ್ಞಾನ ಬಳಸಿಕೊಳ್ಳುವುದು, ಸ್ವೀಕೃತಿಗಳು, ಹಣ ಬಿಡುಗಡೆ, ಯೋಜನಾವಾರು ವೆಚ್ಚದ ವಿವರಗಳನ್ನು ಹಣಕಾಸು ನಿರ್ವಹಣೆಗಾಗಿ ಒದಗಿಸುವುದು, ರಾಜ್ಯದ ಲೆಕ್ಕಪತ್ರಗಳನ್ನು ಅತ್ಯಂತ ನಿಖರವಾಗಿ ತಯಾರಿಸುವುದು ಮತ್ತು ಎಂಐಎಸ್ ವರದಿಗಳನ್ನು ಹಾಗೂ ನಿರ್ಧಾರ ಬೆಂಬಲ ವ್ಯವಸ್ಥೆಗಳನ್ನು ಬಲಪಡಿಸಿರುವುದು ಸೇರಿವೆ.

<u>ಹಣಕಾಸು ವಿಲೀನೀಕರಣ</u>

59. ಪಾರದರ್ಶಕತೆ, ಉತ್ತರದಾಯತ್ವವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಸಾಕಷ್ಟು ಜನರನ್ನು ಬ್ಯಾಂಕಿಂಗ್ ವಲಯದೊಳಗೆ ತರುವುದಕ್ಕಾಗಿ ರಾಜ್ಯ ಸರ್ಕಾರವು ಹಣಕಾಸು

ವಿಲೀನೀಕರಣವನ್ನು ಉತ್ತೇಜಿಸುವ ಉದ್ದೇಶದಿಂದ, ಅದರಲ್ಲೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಎಂಜಿಆರ್‌ಇಜಿಎಸ್ ಅಡಿಯಲ್ಲಿನ ಮಜೂರಿಗಳ ಸಂದಾಯವನ್ನು ಬ್ಯಾಂಕ್ ಖಾತೆಗಳ ಮೂಲಕ ಸಂದಾಯ ಮಾಡುವುದಕ್ಕಾಗಿ ಕ್ರಮಗಳನ್ನು ಕೈಗೊಂಡಿರುತ್ತದೆ. ಈ ಕೆಲಸವನ್ನು ಕೋರುವಂಥ ರಾಗ್ರಾಉಖಾಯೋ ಅಡಿಯಲ್ಲಿನ ಎಲ್ಲಾ ಕೆಲಸದ ಕಾರ್ಡುದಾರರಿಗೆ ನೀಡುವ ಸಂದಾಯಗಳನ್ನು ಅತ್ಯಂತ ಮುತುವರ್ಜಿ ಮತ್ತು ದೃಢಸಂಕಲ್ಪದಿಂದ ಬ್ಯಾಂಕ್ ಮೂಲಕ ನೀಡಲಾಗುತ್ತಿದೆ. ಮಜೂರಿಗಳನ್ನು ವಿತರಿಸುವುದಕ್ಕಾಗಿ ಸುಮಾರು 40 ಲಕ್ಷ ಬ್ಯಾಂಕ್ ಖಾತೆಗಳು ಮತ್ತು ಸುಮಾರು 2.5 ಲಕ್ಷ ಅಂಚೆ ಕಚೇರಿ ಉಳಿತಾಯ ಖಾತೆಗಳನ್ನು ಆರಂಭಿಸಲಾಗಿದೆ. ಎಸ್.ಎಸ್.ಪಿ ಅಡಿಯಲ್ಲಿನ 1 ಲಕ್ಷಕ್ಕಿಂತ ಹೆಚ್ಚು ಫಲಾನುಭವಿಗಳು ಮತ್ತು ರಾಜ್ಯ ಸರ್ಕಾರದ ಸಾಮಾಜಿಕ ಭದ್ರತಾ ನಿವೃತ್ತಿ ವೇತನದ ಅಡಿಯಲ್ಲಿನ 2.5 ಲಕ್ಷ ಪಿಂಚಣಿದಾರರು ತಮ್ಮ ಸಂದಾಯಗಳನ್ನು ಬ್ಯಾಂಕ್ ಮೂಲಕ ಪಡೆಯುತ್ತಿದ್ದಾರೆ. ಅಲ್ಲದೆ ಪ್ರಸ್ತುತ ಸ್ಮಾರ್ಟ್‌ಕಾರ್ಡ್ ಆಧಾರಿತ ನಿವೃತ್ತಿ ವೇತನ ವಿತರಣೆಯನ್ನು ರಾಜ್ಯದ 6 ಜಿಲ್ಲೆಗಳಲ್ಲಿ ಪ್ರಾಯೋಗಿಕ ಆಧಾರದ ಮೇಲೆ ಅನುಷ್ಠಾನಗೊಳಿಸಲಾಗುತ್ತಿದೆ.

<u>ಮಾಹಿತಿ ತಂತ್ರಜ್ಞಾನ ಉಪಕ್ರಮಗಳು</u>

60. ನಾಗರಿಕರು ತಮ್ಮ ತೆರಿಗೆಗಳನ್ನು ಸಂದಾಯ ಮಾಡುವುದನ್ನು ಸರಳಗೊಳಿಸುವ ಮೂಲಕ ಆದಾಯ ಸಂಗ್ರಹಣೆಗಳನ್ನು ಹೆಚ್ಚಿಸುವುದಕ್ಕಾಗಿ ವಿವಿಧ ಇ – ಆಡಳಿತ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ತೆರಿಗೆ ಪಾವತಿದಾರರು ಮತ್ತು ಸರ್ಕಾರದ ನಡುವಿನ ಭೌತಿಕ ಸಂಪರ್ಕವನ್ನು ಕಡಿಮೆ ಮಾಡುವುದು ಈ ಉಪ ಕ್ರಮಗಳ ಉದ್ದೇಶವಾಗಿದೆ. ತೆರಿಗೆಗಳನ್ನು ಆನ್ ಲೈನ್‌ನ ಮೂಲಕ ಸಂದಾಯ ಮಾಡುವುದರಿಂದ ಸಮಯದ ಉಳಿತಾಯವಾಗುವುದಲ್ಲದೆ ತೆರಿಗೆದಾರರಿಗೆ ಅನುಕೂಲಕರವಾದ ಸೇವೆ ದೊರೆಯುತ್ತದೆ ಮತ್ತು ಇದರೊಂದಿಗೆ ತೆರಿಗೆಗಳ ಸಂಗ್ರಹಣಾ ವೆಚ್ಚವನ್ನೂ ಸಹ ತಗ್ಗಿಸಿದಂತಾಗುತ್ತದೆ.

**<u>ಹೊಸ ನಿವೃತ್ತಿ ವೇತನ ಯೋಜನೆ</u>**

61. ದಿನಾಂಕ 1.4.2006 ಅಥವಾ ಅದರ ನಂತರ ರಾಜ್ಯ ಸರ್ಕಾರಿ ಸೇವೆಗೆ ಸೇರಿದ ಎಲ್ಲ ನೌಕರರಿಗೆ ಏಪ್ರಿಲ್, 2010 ರಿಂದ ಪೆನ್ಷನ್ ಫಂಡ್ ರೆಗ್ಯುಲೇಟರಿ ಮತ್ತು ಡೆವಲಪಮೆಂಟ್ ಅಥಾರಿಟಿ ರೂಪಿಸಿರುವ ನಿಯಮಗಳು ಹಾಗೂ ನಿಯಂತ್ರಣಗಳಿಗನುಸಾರ ಹೊಸ ನಿವೃತ್ತಿ ವೇತನ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಈ ಯೋಜನೆಗೆ ನೌಕರರು ಪ್ರತಿ ಮಾಹೆ ತಮ್ಮ ಮೂಲ ವೇತನ ಹಾಗೂ ತುಟ್ಟಿಭತ್ಯೆಯ ಶೇ.10ರಷ್ಟನ್ನು ವಂತಿಗೆಯಾಗಿ ನೀಡಬೇಕಾಗಿದ್ದು ಸರ್ಕಾರವು ಅಷ್ಟೇ ಮೊತ್ತವನ್ನು ತನ್ನ ಪಾಲಿನ ವಂತಿಗೆಯಾಗಿ ನೀಡ ಬೇಕಾಗಿರುತ್ತದೆ. 2006ರ ಏಪ್ರಿಲ್ 1 ಹಾಗೂ ನಂತರ ರಾಜ್ಯ ಸರ್ಕಾರಿ ಸೇವೆಗೆ ಸೇರಿರುವ ಸುಮಾರು 60,000 ನೌಕರರಿಗೆ ತನ್ನ ಪಾಲಿನ ವಂತಿಗೆಯಾಗಿ ನೀಡಲು 2010–11ನೇ ಸಾಲಿನಲ್ಲಿ ಸರ್ಕಾರವು ರೂ. 175 ಕೋಟಿಗಳನ್ನು ಒದಗಿಸಿದೆ.

# ಅಧ್ಯಾಯ – 7

## ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು 2010–14

(ರೂ.ಗಳು ಕೋಟಿಗಳಲ್ಲಿ)

| ಬಾಬುಗಳು | 2008-09 ಲೆಕ್ಕ | 2009-10 ಅಂದಾಜು | 2009-10 ಪೂ.ಅಂ | 2010-11 ಅಂದಾಜು | 2011-12 ಪ್ರಾಕ್ಷೇಪಣೆ | 2012-13 ಪ್ರಾಕ್ಷೇಪಣೆ | 2013-14 ಪ್ರಾಕ್ಷೇಪಣೆ |
|---|---|---|---|---|---|---|---|
| ರಾಜಸ್ವ ಸ್ವೀಕೃತಿಗಳು | 43291 | 48389 | 46406 | 53639 | 60763 | 68487 | 77230 |
| ಇದರಲ್ಲಿ | | | | | | | |
| ರಾಜ್ಯ ಒಡೆತನದ ತೆರಿಗೆ ರಾಜಸ್ವಗಳಿಂದ | 27646 | 32721 | 29339 | 36228 | 41120 | 46673 | 52975 |
| ತೆರಿಗೆಯೇತರ ರಾಜಸ್ವಗಳು | 3159 | 2130 | 2495 | 2820 | 2996 | 3202 | 3430 |
| ಕೇಂದ್ರದಿಂದ ದೊರೆಯುವ ಸಂಪನ್ಮೂಲಗಳು – ವರ್ಗಾವಣೆ | 7154 | 7645 | 7000 | 9060 | 10283 | 11672 | 13248 |
| – ಅನುದಾನಗಳು | 5332 | 5893 | 7572 | 5530 | 6363 | 6940 | 7577 |
| ರಾಜಸ್ವ ವೆಚ್ಚ | 41659 | 47238 | 45868 | 53138 | 59647 | 66130 | 73266 |
| ಇದರಲ್ಲಿ | | | | | | | |
| ಬಡ್ಡಿ | 4532 | 5578 | 5250 | 6316 | 7141 | 8055 | 9085 |
| ವೇತನಗಳು | 9927 | 11305 | 11306 | 11366 | 12858 | 14185 | 15574 |
| ನಿವೃತ್ತಿ ವೇತನಗಳು | 4113 | 4001 | 3500 | 4500 | 5175 | 5951 | 6844 |
| ಸಹಾಯಧನ (ಆಹಾರ,ಸಾರಿಗೆ, ವಸತಿ ಮತ್ತು ಕೈಗಾರಿಕೆ) | 1472 | 1960 | 1744 | 1674 | 1841 | 2025 | 2228 |
| ವಿದ್ಯುತ್ ಸಹಾಯಧನ | 1943 | 2400 | 1900 | 2825 | 3108 | 3418 | 3760 |
| ಯುಎಲ್‌ಬಿಗಳಿಗೆ ವರ್ಗಾವಣೆ | 2374 | 2720 | 2370 | 2885 | 3676 | 4168 | 4721 |
| ಪ್ರಮುಖ ಒ ಮತ್ತು ಎಂ (ರಸ್ತೆಗಳು, ಕಟ್ಟಡಗಳು ಮತ್ತು ನೀರಾವರಿ) | 636 | 750 | 711 | 339 | 373 | 411 | 452 |
| ಇತರೆ ಓ ಮತ್ತು ಎಂ (ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಕೃಷಿ, ಅರಣ್ಯ) | 8487 | 4413 | 4275 | 7979 | 8561 | 9151 | 9780 |
| ಆಡಳಿತಾತ್ಮಕ ವೆಚ್ಚ | 742 | 832 | 938 | 901 | 956 | 1029 | 1108 |
| ಇತರೆ ರಾಜಸ್ವ ವೆಚ್ಚ | 7433 | 13280 | 13873 | 14353 | 15957 | 17736 | 19714 |
| ಬಂಡವಾಳ ಸ್ವೀಕೃತಿ (ಸಾಲೇತರ) | 238 | 1977 | 69 | 2903 | 615 | 125 | 137 |
| **ರಾಜಸ್ವ ಕೊರತೆ** | **-1631** | **-1151** | **-538** | **-500** | **-1116** | **-2358** | **-3964** |
| ಬಂಡವಾಳ ಸಂಚಯ | 10602 | 11622 | 11873 | 13112 | 11763 | 14086 | 17346 |
| **ವಿತ್ತೀಯ ಕೊರತೆ** | **8732** | **8493** | **11266** | **9708** | **10745** | **12127** | **13687** |
| ಒಟ್ಟು ಸಾಲ ಸಂಗ್ರಹಣೆ | 68064 | 77103 | 79644 | 89403 | 100149 | 112276 | 125963 |
| ಬಡ್ಡಿ | 4532 | 5578 | 5250 | 6316 | 7141 | 8055 | 9085 |
| ಸಾಲ ಸೇವೆಗಳು | 6310 | 7782 | 7560 | 8779 | 10772 | 12416 | 13767 |
| ವೇತನ + ನಿವೃತ್ತಿ ವೇತನ + ಬಡ್ಡಿ | 18572 | 20884 | 20056 | 22182 | 25174 | 28191 | 31503 |

# ಅಧ್ಯಾಯ – 7

# ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು 2010–14

(ರೂ.ಗಳು ಕೋಟಿಗಳಲ್ಲಿ)

| ಬಾಬುಗಳು | 2008-09 ಲೆಕ್ಕ | 2009-10 ಅಂದಾಜು | 2009-10 ಪೂ.ಅಂ | 2010-11 ಅಂದಾಜು | 2011-12 ಪ್ರಾಕ್ಷೇಪಣೆ | 2012-13 ಪ್ರಾಕ್ಷೇಪಣೆ | 2013-14 ಪ್ರಾಕ್ಷೇಪಣೆ |
|---|---|---|---|---|---|---|---|
| **ಒಟ್ಟು ಬಜೆಟ್ ಸಾಲಗಳು** | | | | | | | |
| **ನಿವ್ವಳ ಬಜೆಟ್ ಸಾಲಗಳು** | **-456** | **-697** | **-531** | **-880** | **-580** | **-337** | **-299** |
| ಸಂಚಿತ ಬಡ್ಡಿ | 4785 | 5870 | 5429 | 6474 | 7213 | 8056 | 9085 |
| **ಸಂಚಿತ ರಾಜಸ್ವ ಕೊರತೆ** | **-1389** | **-750** | **-259** | **-343** | **-1044** | **-2356** | **-3964** |
| ಸಂಚಿತ ಬಂಡವಾಳ ರಚನೆ | 10602 | 11622 | 11873 | 13112 | 11763 | 14086 | 17346 |
| **ಸಂಚಿತ ವಿತ್ತೀಯ ಕೊರತೆ** | **8277** | **7796** | **10735** | **8828** | **10165** | **11790** | **13388** |
| ಸಂಚಿತ ಸಾಲ ಸಂಗ್ರಹಣೆ | 71410 | 79794 | 82513 | 91575 | 101953 | 113888 | 127333 |
| **ಸಂಚಿತ ರಾಜಸ್ವ ಕೊರತೆ/ಜಿಎಸ್‌ಡಿಪಿ** | **-0.51%** | **-0.25%** | **-0.09%** | **-0.10%** | **-0.28%** | **-0.56%** | **-0.84%** |
| **ಪ್ರಸಕ್ತ ದರಗಳಲ್ಲಿ ಜಿಎಸ್‌ಡಿಪಿ** | 270697 | 294952 | 298465 | 328312 | 370532 | 418183 | 471961 |
| ಹಣದುಬ್ಬರ | 4.00% | 4.00% | 4.00% | 5.00% | 4.50% | 4.50% | 4.50% |
| ಜಿಎಸ್‌ಡಿಪಿಯ ವಾರ್ಷಿಕ ವಾಸ್ತವ ಬೆಳವಣಿಗೆ | 5.65% | 6.00% | 5.77% | 8.00% | 8.00% | 8.00% | 8.00% |
| ಜಿಎಸ್‌ಡಿಪಿಗೆ ಶೇಕಡಾವಾರಿನಂತೆ ಅದರ ರಾಜಸ್ವ ಸ್ವೀಕೃತಿಗಳು | 15.99% | 16.41% | 15.55% | 16.34% | 16.40% | 16.38% | 16.36% |
| ಇದರಲ್ಲಿ | | | | | | | |
| ರಾಜ್ಯ ಒಡೆತನದ ತೆರಿಗೆ ರಾಜಸ್ವಗಳು | 10.21% | 11.09% | 9.83% | 11.03% | 11.10% | 11.16% | 11.22% |
| ತೆರಿಗೇತರ ರಾಜಸ್ವಗಳು | 1.17% | 0.72% | 0.84% | 0.86% | 0.81% | 0.77% | 0.73% |
| ಕೇಂದ್ರದಿಂದ ದೊರೆಯುವ ಸಂಪನ್ಮೂಲಗಳು – ವರ್ಗಾವಣೆ | 2.64% | 2.59% | 2.35% | 2.76% | 2.78% | 2.79% | 2.81% |
| – ಅನುದಾನಗಳು | 1.97% | 2.00% | 2.54% | 1.68% | 1.72% | 1.66% | 1.61% |
| ರಾಜಸ್ವ ವೆಚ್ಚ | 15.39% | 16.02% | 15.37% | 16.19% | 16.10% | 15.81% | 15.52% |
| ಇದರಲ್ಲಿ | | | | | | | |
| ಬಡ್ಡಿ | 1.67% | 1.89% | 1.76% | 1.92% | 1.93% | 1.93% | 1.93% |
| ವೇತನಗಳು | 3.67% | 3.83% | 3.79% | 3.46% | 3.47% | 3.39% | 3.30% |
| ನಿವೃತ್ತಿ ವೇತನಗಳು | 1.52% | 1.36% | 1.17% | 1.37% | 1.40% | 1.42% | 1.45% |
| ಸಹಾಯಧನ (ಆಹಾರ,ಸಾರಿಗೆ, ವಸತಿ ಮತ್ತು ಕೈಗಾರಿಕೆ) | 0.54% | 0.66% | 0.58% | 0.51% | 0.50% | 0.48% | 0.47% |
| ವಿದ್ಯುತ್ ಸಹಾಯಧನ | 0.72% | 0.81% | 0.64% | 0.86% | 0.84% | 0.82% | 0.80% |
| ಯುಎಲ್‌ಬಿಗಳಿಗೆ ವರ್ಗಾವಣೆ | 0.88% | 0.92% | 0.79% | 0.88% | 0.99% | 1.00% | 1.00% |
| ಪ್ರಮುಖ ಒ ಮತ್ತು ಎಂ (ರಸ್ತೆಗಳು, ಕಟ್ಟಡಗಳು ಮತ್ತು ನೀರಾವರಿ) | 0.23% | 0.25% | 0.24% | 0.10% | 0.10% | 0.10% | 0.10% |

# ಅಧ್ಯಾಯ – 7

# ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು 2010–14

(ರೂ.ಗಳು ಕೋಟಿಗಳಲ್ಲಿ)

| ಬಾಬುಗಳು | 2008-09 ಲೆಕ್ಕ | 2009-10 ಅಂದಾಜು | 2009-10 ಪೂ.ಅಂ | 2010-11 ಅಂದಾಜು | 2011-12 ಪ್ರಾಕ್ಷೇಪಣೆ | 2012-13 ಪ್ರಾಕ್ಷೇಪಣೆ | 2013-14 ಪ್ರಾಕ್ಷೇಪಣೆ |
|---|---|---|---|---|---|---|---|
| ಇತರೆ ಓ ಮತ್ತು ಎಂ (ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಕೃಷಿ, ಅರಣ್ಯ) | 3.14% | 1.50% | 1.43% | 2.43% | 2.31% | 2.19% | 2.07% |
| ಆಡಳಿತಾತ್ಮಕ ವೆಚ್ಚ | 0.27% | 0.28% | 0.31% | 0.27% | 0.26% | 0.25% | 0.23% |
| ಇತರೆ ರಾಜಸ್ವ ವೆಚ್ಚ | 2.75% | 4.50% | 4.65% | 4.37% | 4.31% | 4.24% | 4.18% |
| **ರಾಜಸ್ವ ಕೊರತೆ** | **-0.60%** | **-0.39%** | **-0.18%** | **-0.15%** | **-0.30%** | **-0.56%** | **-0.84%** |
| ಬಂಡವಾಳ ಸ್ವೀಕೃತಿ (ಸಾಲೇತರ) | 0.09% | 0.67% | 0.02% | 0.88% | 0.17% | 0.03% | 0.03% |
| ಬಂಡವಾಳ ರಚನೆ ಮೇಲಿನ ವೆಚ್ಚ | 3.92% | 3.94% | 3.98% | 3.99% | 3.17% | 3.37% | 3.68% |
| **ವಿತ್ತೀಯ ಕೊರತೆ** | **3.23%** | **2.88%** | **3.77%** | **2.96%** | **2.90%** | **2.90%** | **2.90%** |
| **ಬಜೆಟ್ ಸಾಲಗಳಿಲ್ಲದಿರುವುದು** | | | | | | | |
| **ಸಂಚಿತ ರಾಜಸ್ವ ಕೊರತೆ** | **-0.51%** | **-0.25%** | **-0.09%** | **-0.10%** | **-0.28%** | **-0.56%** | **-0.84%** |
| ಸಂಚಿತ ಬಂಡವಾಳ ವೆಚ್ಚ | 3.92% | 3.94% | 3.98% | 3.99% | 3.17% | 3.37% | 3.68% |
| **ಸಂಚಿತ ವಿತ್ತೀಯ ಕೊರತೆ** | **3.06%** | **2.64%** | **3.60%** | **2.69%** | **2.74%** | **2.82%** | **2.84%** |
| ಸಂಚಿತ ಸಾಲ ಸಂಗ್ರಹಣೆ | **26.38%** | **27.05%** | **27.65%** | **27.89%** | **27.52%** | **27.23%** | **26.98%** |

1